ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 34 ನವೆಂಬರ್ 4, 1979 40 ಪೈಸೆ

ಕನ್ನಡ ರಾಜ್ಯೋತ್ಸವ

ನವೆಂಬರ್ ಒಂದರಂದು ಇಪ್ಪತ್ತನಾಲ್ಕನೇ ರಾಜ್ಯೋತ್ಸವದ ಆಚರಣೆಯು ವಿಜೃಂಭಣೆಯಿಂದಲೇ ನಡೆಯಿತು. ನವೆಂಬರ್ ಒಂದರಿಂದ ಕರ್ನಾಟಕದ ಆಡಳಿತದಲ್ಲಿ ಪೂರ್ಣ ಕನ್ನಡ ಬಳಸಲು ರಾಜ್ಯ ಸರಕಾರ ತೀರ್ಮಾನ ಮಾಡಿರುವುದು ಈ ಭಾರಿಯ ಕನ್ನಡ ರಾಜ್ಯೋತ್ಸವಕ್ಕೆ ಒಂದು ಹೊಸ ಕಳೆಯನ್ನಿತ್ತಿದ್ದರೆ, "ಕನ್ನಡವೇ ಒಡ್ಡಿರುವ" ಕೆಲವು ಸಮಸ್ಯೆಗಳ ವಿರುದ್ಧ ಹೋರಾಡಲು ರಾಜ್ಯದ ಸಹಸ್ರಾರು ಮಂದಿ ಕನ್ನಡ ಪದವೀಧರರು ತೀರ್ಮಾನಿಸಿ, ಕಾರ್ಯಕ್ರಮ ಹಾಕಿಕೊಂಡಿರುವುದು ವಾಸ್ತವಿಕತೆಯನ್ನು ತೋರಿಸಿಕೊಡುತ್ತೆ. ಕನ್ನಡದ ಮೇಲಿನ ಅಭಿಮಾನ ಮತ್ತು ಕನ್ನಡದ ಮೂಲಕ ಹೊಟ್ಟೆ ತುಂಬಬಹುದೆಂಬ ನಿರೀಕ್ಷೆಗಳಿಂದ ಕನ್ನಡ ಕಲಿತು ಪದವೀಧರರಾದವರು ಇಂದು ನಿರುದ್ಯೋಗಿಗಳಾಗಿ ಇರಬೇಕಾದ ಪರಿಸ್ಥಿತಿ ಬಂದುದು ಬೇಸರ. ಹಾಗೆಯೇ ಇವರು ಹೋರಾಟ ಮಾಡುವ ದಿಕ್ಕಿನಲ್ಲಿ ಹೊರಟಿರುವುದು ಸಂತೋಷ.

ಆದರೆ ಬಂಡವಾಳಶಾಹಿ ಪಥದಲ್ಲಿ ನಮ್ಮ ದೇಶವನ್ನು ಕೊಂಡೊಯ್ಯಲು ಆಳುವ ವರ್ಗಗಳು ಶ್ರಮಿಸುತ್ತಾ ಬಂದಿರುವುದರ ಪರಿಣಾಮವಾಗಿ ನಿರುದ್ಯೋಗವು ಪೆಡಂಭೂತವಾಗಿ ರಾಷ್ಟ್ರದಾದ್ಯಂತ ಎದ್ದುನಿಂತಿದೆ ಎಂಬುದನ್ನೂ, ನಮ್ಮ ರಾಜ್ಯದಲ್ಲೂ ಇದರ ಪರಿಣಾಮವನ್ನು ಅನುಭವಿಸುತ್ತಲಿದ್ದೇವೆ ಎಂಬುದನ್ನೂ ಕನ್ನಡ ಪದವೀಧರರು ತಿಳಿದಿರಬೇಕು. ಇಂದು ನಿರುದ್ಯೋಗವೆಂಬುದು

ಸಂಪಾದಕೀಯ

ಕನ್ನಡ ಪದವೀಧರರುಗಳಿಗೆ ಮಾತ್ರವೇ ಸೀಮಿತವಾಗಿರದೆ, ಇತರೆ ವಿದ್ಯಾವಂತ ಯುವಕರು ಹಾಗೂ ಅವಿದ್ಯಾವಂತ ಜನತೆಯನ್ನೂ ತೀವ್ರವಾಗಿ ಬಾಧಿಸುತ್ತಲಿರುವುದರಿಂದ ಎಲ್ಲರೂ ಒಂದಾಗಿ ಹೋರಾಡುವ ಅಗತ್ಯವಿದೆ. ಇಂದು ನಿರುದ್ಯೋಗ ಸಮಸ್ಯೆಯು ಜಗತ್ತಿನ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳನ್ನು ಬಾಧಿಸುತ್ತಲಿದ್ದರೆ, ಸಮಾಜವಾದಿ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆಯೆಂಬುದೇ ಇಲ್ಲ. ನೂರಕ್ಕೆ ನೂರುಮಂದಿ ಇಲ್ಲಿ ಅಕ್ಷರಸ್ಥರೂ ಹೌದು ಹಾಗೆಯೇ ಉದ್ಯೋಗದಲ್ಲಿಯೂ ಇರುವರು.

ಕಾರ್ಮಿಕವರ್ಗದ ನೇತೃತ್ವದಲ್ಲಿ ಶೋಷಣೆಗೊಳಗಾದ ಜನರೆಲ್ಲರೂ ಸೇರಿ ಕ್ರಾಂತಿಕಾರಿ ಬದಲಾವಣೆ ತಂದು, ಸಮಾಜವಾದ ವ್ಯವಸ್ಥೆ ಜಾರಿಗೊಳಿಸಿದ್ದರಿಂದಲೇ ಇದು ಸಾಧ್ಯವಾಯಿತು. ಈ ಸಾಧ್ಯವನ್ನು ಅರಿತು ಹೋರಾಟದ ಪಥದಲ್ಲಿರುವ ಕನ್ನಡ ಪದವೀಧರರುಗಳು, ಇತರ ನಿರುದ್ಯೋಗಿಗಳೊಡನೆ ಸೇರಿಕೊಂಡು, ಬಲಿಷ್ಟ ಸಂಘಟನೆಯನ್ನು ಕಟ್ಟಿ, ಇತರೆಲ್ಲಾ ಶೋಷಣೆಗೊಳಗಾದ ಜನತೆಯೊಂದಿಗೆ ಸೇರಿ ಹೋರಾಡಿ ಸಮಾಜವನ್ನು ಬದಲಾಯಿಸುವತ್ತ ಮುನ್ನಡೆಯುವರೆಂದು ಆಶಿಸುತ್ತೇವೆ. ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಸಾರ್ವತ್ರಿಕ ಮತ್ತು ಉಚಿತವಾದ ಖಡ್ಡಾಯ ಶಿಕ್ಷಣವನ್ನಿತ್ತು ಅನಕ್ಷರತೆಯನ್ನು ಹೋಗುವಂತೆ ಮಾಡುವುದಕ್ಕಾಗಿ ಬೇಕಾದ ಕ್ರಮವನ್ನು ರಾಜ್ಯ ಸರಕಾರವು ಮಾಡುವಂತೆ ಕನ್ನಡ ಪ್ರೇಮಿಗಳು ಒತ್ತಾಯಿಸಬೇಕು. ●

ಮಾಲಕರ ಪಿತೂರಿಯನ್ನೆದುರಿಸಿ

ಮುನ್ನಡೆದಿದೆ ಮೈಕೋ ಹೋರಾಟ

ಬಹು ರಾಷ್ಟ್ರೀಯ ಕಂಪೆನಿ ಮೈಕೋದ ಮಾಲಕರು ಮುಷ್ಕರನಿರತ ಕಾರ್ಮಿಕರ ಐಕ್ಯತೆ ಮತ್ತು ಹೋರಾಟವನ್ನು ಹತ್ತಿಕ್ಕಲು ಏನೇ ತಂತ್ರಗಳನ್ನು ಬಳಸಿದರೂ, ಕಾರ್ಮಿಕರು ಎಂದೆಂದೂ ಕಂಡಿರದ ಒಗ್ಗಟ್ಟಿನಿಂದ ಹೋರಾಟವನ್ನು ಮುನ್ನಡೆಸಿದ್ದಾರೆ. ಲಕ್ಷಗಟ್ಟಲೆ ರೂಪಾಯಿಗಳನ್ನು ವೆಚ್ಚಮಾಡಿ ಪತ್ರಿಕೆಗಳ ಮೂಲಕ ಸುಳ್ಳುಪ್ರಚಾರ ಮಾಡುವುದು, ಗೂಂಡಾಗಿರಿಯಿಂದ ಭಯ ಮೂಡಿಸುವುದು, ಕಾರ್ಮಿಕರಿಗೆ ಆಸೆಗಳನ್ನು ತೋರಿಸುವುದು - ಇತ್ಯಾದಿ ಕುತಂತ್ರಗಳಿಗೆ ಬಲಿಯಾಗುವುದಕ್ಕೆ ಬದಲು, ಸಹಸ್ರಾರು ಮಂದಿ ಮೈಕೋ ಕಾರ್ಮಿಕರು ದಿನಾಎಂಬಂತೆ ಸಭೆಸೇರಿ ಮಾಲಕರ ಅಪಪ್ರಚಾರಕ್ಕೆ ಉತ್ತರಿಸುತ್ತಲಿದ್ದಾರೆ.

ಮೈಕೋ ಕಾರ್ಖಾನೆ ವಠಾರದಲ್ಲಿ ಪೋಲೀಸರು ನಿರ್ಬಂಧಕಾಜ್ಞೆ ಹೇರಿರುವರಾದರೂ, ಅಕ್ಟೋಬರ್ 5ನೇ ತಾರೀಖಿನಿಂದ ಇಂದಿನ ತನಕ ಮೈಕೋ ಕಾರ್ಮಿಕರು 20 ಸಭೆಗಳನ್ನು ನಗರದ ಬೇರೆಬೇರೆಡೆ ನಡೆಸಿರುವರು. ಪ್ರತಿಯೊಂದು ಸಭೆಯಲ್ಲೂ ನಾಲ್ಕರಿಂದ ಐದುಸಾವಿರ ಕಾರ್ಮಿಕರು ಹಾಜರಾಗುತ್ತಲಿರುವುದು ಮಾಲಕರ ಸುಳ್ಳು ಪ್ರಚಾರಕ್ಕೆ ಉತ್ತರವಾಗಿದೆ. ಏಳು ಸಹಸ್ರ ಕಾರ್ಮಿಕರಿರುವ ಈ ಕಾರ್ಖಾನೆಯಲ್ಲಿ ಸುಮಾರು 70 ಮಂದಿಯು ಹೊರತು ಬೇರೆ ಯಾರೂ ಕೆಲಸಕ್ಕೆ ಹೋಗುತ್ತಿಲ್ಲ. ಮೈಕೋ ಕಾರ್ಮಿಕರ ಹೋರಾಟಕ್ಕೆ ನಗರದ ಎಲ್ಲಾ ಕಾರ್ಮಿಕ ಸಂಘಟನೆಗಳು ಮತ್ತು ಹೆಚ್ಚಿನ ರಾಜಕೀಯ ಪಕ್ಷಗಳೂ ಬೆಂಬಲವಿತ್ತಿವೆ. ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ಒಂದು ಸಭೆಯಲ್ಲಿ ಮಾತನಾಡಿ ಸಿ.ಐ.ಟಿ.ಯು.ವಿನ ಬೆಂಬಲ ಸೂಚಿಸಿದರು.

ನವೆಂಬರ್ ನಾಲ್ಕರಂದು ಎಲ್ಲಾ ಕಾರ್ಮಿಕ ಸಂಘಟನೆಗಳ ಸಮಾವೇಶವು ನಗರದಲ್ಲಿ ಜರುಗಲಿದ್ದು, ಇದರಲ್ಲಿ ಮೈಕೋ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಕಾರ್ಯಕ್ರಮಗಳನ್ನು ಸಂಘಟಿಸುವ ಬಗ್ಗೆ ತೀರ್ಮಾನ ಮಾಡಲಾಗುವುದು. ಸಾರ್ವತ್ರಿಕ ಸಾಂಕೇತಿಕ ಮುಷ್ಕರ, ಬೆಂಗಳೂರು ಬಂದಿನಂತಹ ಕಾರ್ಯಕ್ರಮಗಳನ್ನು ಮಾಡುವುದು, ರಾಜ್ಯದಾದ್ಯಂತ ಸೌಹಾರ್ದ ಕಾರ್ಯಕ್ರಮ ಸಂಘಟಿಸುವುದರ ಬಗ್ಗೆ ನಿರ್ಣಯಿಸಲಾಗುವುದು. ನವೆಂಬರ್ ಏಳರಂದು ನಗರದ ಕಬ್ಬನ್‌ಪಾರ್ಕಿನಲ್ಲಿ ಎಲ್ಲಾ ಸಂಘಟನೆಗಳೂ ಸೇರಿ ಬೃಹತ್ ರ್‍ಯಾಲಿಯನ್ನು ನಡೆಸಲಿವೆ. "ಮೈಕೋ ಕಾರ್ಮಿಕರ ಹೋರಾಟ" ಎಂದರೆ ಎಲ್ಲಾ ಕಾರ್ಮಿಕರ ಹೋರಾಟ ಎಂಬುದನ್ನು ಅರಿತು, ಈ ಹೋರಾಟವನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಎಲ್ಲಾ ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲಿದೆ. ●

ನಿರಂಕುಶಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಒಂದಾಗಿ

ದೇಶದ ಇಂದಿನ ನಿರ್ಣಾಯಕ ಪರಿಸ್ಥಿತಿಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳಿಗೆ ಮುಂಬರುವ ಚುನಾವಣೆಯಲ್ಲಿ ಪ್ರಬಲ ಪ್ರಹಾರ ನೀಡಿ ಅವುಗಳನ್ನು ಸೋಲಿಸಲು ಒಂದಾಗಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಪೊಲಿಟ್ ಬ್ಯೂರೋ ತನ್ನ ಇತ್ತೀಚೆಗಿನ ಹೇಳಿಕೆಯಲ್ಲಿ ಜನತೆಗೆ ಕರೆ ನೀಡಿದೆ.

ತನ್ನ ಕಳೆದ ಸಭೆಯ ನಂತರದ ವಿದ್ಯಮಾನಗಳನ್ನು ಪೊಲಿಟ್ ಬ್ಯೂರೋ ಚರ್ಚಿಸಿ, ಅದರಲ್ಲೂ ಮುಖ್ಯವಾಗಿ ಹರ್‍ಯಾನಾದ ಜನತಾ ಸರಕಾರದ ಪೋಲೀಸರು ಫರಿದಾಬಾದ್‌ನ ಕಾರ್ಮಿಕರ ಮೇಲೆ ನಡೆಸಿದ ಗೋಲಿಬಾರ್‌ನಿಂದಾಗಿ ಹತ್ತು ಮಂದಿ ಕಾರ್ಮಿಕರು ಕೊಲ್ಲಲ್ಪಟ್ಟದ್ದು, ಅಹಮದಾಬಾದ್‌ನಲ್ಲಿ ನಡೆದ ಭೀಕರ ಪುಂಡಾಟಿಕೆ, ಅಸ್ಸಾಮೇತರ ಪ್ರಜೆಗಳ ವಿರುದ್ಧ, ಅಸ್ಸಾಂನಲ್ಲಿ ನಡೆಯುತ್ತಿರುವ ಪ್ರತಿಗಾಮಿ ಚಳವಳಿ ಮತ್ತು ತಮಿಳುನಾಡಿನ ಪೋಲೀಸರ ಮುಷ್ಕರ ಇತ್ಯಾದಿಗಳ ಹಿನ್ನೆಲೆಯಲ್ಲಿ, ದೇಶವು ಇಂದು ಎದುರಿಸುತ್ತಿರುವ ಗಂಭೀರ ಸ್ವರೂಪದ ಆರ್ಥಿಕ ಮತ್ತು ಸಾಮಾಜಿಕ ಮುಗ್ಗಟ್ಟಿನ ನಡುವೆ ಚುನಾವಣೆಗಳು ನಡೆಯುತ್ತಿವೆಯೆಂದೂ, ಜನ ಸಮುದಾಯದ ಹೋರಾಟಗಳಿಂದ ಚುನಾವಣೆಗಳನ್ನು ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲವೆಂದೂ, ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಜನಸಾಮಾನ್ಯರನ್ನು ದಾರಿತಪ್ಪಿಸಲು ಪ್ರತಿಗಾಮಿ ಶಕ್ತಿಗಳು ನಡೆಸುತ್ತಿರುವ ಕುತಂತ್ರಗಳ ವಿರುದ್ಧ ಜನತೆ ಜಾಗ್ರತರಾಗಿರಬೇಕೆಂದೂ ಕರೆ ನೀಡಿದೆ.

ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು

ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋ ಕರೆ

ಒಂದುಗೂಡಿಸಲು ನಡೆಸಲಾದ ಪ್ರಯತ್ನಗಳು ಸಾಕಷ್ಟು ಫಲಕಾರಿಯಾಗುತ್ತಿರುವುದು. ಪ. ಬಂಗಾಳ, ಮಹಾರಾಷ್ಟ್ರ ಮತ್ತು ಕೇರಳ ಮತ್ತಿತರ ರಾಜ್ಯಗಳ ಇತ್ತೀಚೆಗಿನ ರಾಜಕೀಯ ಬೆಳವಣಿಗೆಗಳಿಂದ ಕಂಡುಬರುತ್ತಿದೆ. ವಾಸುದೇವನ್ ನಾಯರ್ ಮುಂದಾಳುತ್ವದ ಕೇರಳ ಮಂತ್ರಿಮಂಡಲದ ರಾಜೀನಾಮೆ, ಕೇರಳದಲ್ಲಿ ಎರಡೂ ಕಮ್ಯುನಿಸ್ಟ್ ಪಕ್ಷಗಳು, ಆರ್. ಎಸ್. ಪಿ. ಮತ್ತಿತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಪರಸ್ಪರ ಸಮೀಪಕ್ಕೆ ಬರುತ್ತಿರುವುದು, ಈ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದ ದೃಷ್ಟಿಯಲ್ಲೇ ಒಂದು ಅತೀ ಪ್ರಾಮುಖ್ಯವಾದ ಬೆಳವಣಿಗೆ. ಹಾಗಿದ್ದರೂ ಈ ಹಿಂದೆ ಇಂದಿರಾ ಗಾಂಧಿ ಮತ್ತು ಚಿಕ್ಕಮಗಳೂರು ಉಪ ಚುನಾವಣೆಗಳ ಪ್ರಶ್ನೆಯಲ್ಲಿ ಕಾಂಗ್ರೆಸ್ ಪಕ್ಷದ ನಿಲುವನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದ್ದಂತಹ ಎ. ಕೆ. ಆಂಟನಿ ಅವರ ನೇತೃತ್ವದಲ್ಲಿರುವ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಇದೀಗ ಸರ್ವಾಧಿಕಾರದ ವಿರುದ್ಧ ನಡೆಯಲಿರುವ ಹೋರಾಟವನ್ನು ಬಲಪಡಿಸಲು ಎಡ ಮತ್ತು ಪ್ರಜಾಸತ್ತಾತ್ಮಕವಾದಿ ಶಕ್ತಿಗಳೊಂದಿಗೆ ಸೇರುವ ಬದಲು, ಕಾಂಗ್ರೆಸ್ (ಐ) ಮತ್ತು ಜನತಾ ಪಕ್ಷಗಳ ಜೊತೆಗೂಡಿ ಕೋಯಾ ಮಂತ್ರಿಮಂಡಲದ ರಚನೆಗೆ ನೆರವಾದುದು ತೀರಾ ವಿಷಾದನೀಯ. ಇಡೀ ದೇಶದಲ್ಲೇ ಕಾಂಗ್ರೆಸ್ ಪಕ್ಷವು ಸರ್ವಾಧಿಕಾರದ ವಿರುದ್ಧ ಸೆಣಸಾಡುವ ತನ್ನ ನಿಲುಮೆಯನ್ನು ಧೃಢಪಡಿಸಿರುವಾಗ ಕೇರಳ ಪ್ರದೇಶ ಕಾಂಗ್ರೆಸ್ ತೋರಿಸಿದ ಈ ವರ್ತನೆ, ಮುಂದೆ ಅದು ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡು ಎಡ ಮತ್ತು ಪ್ರಜಾಪ್ರ

[ಕಡೆಯ ಪುಟ ನೋಡಿ]

"ಬೆಂಗಳೂರು ಜಿಲ್ಲಾ ರೈತಸಂಘ 3ನೇ ಸಮ್ಮೇಳನ"

ದೇವರಾಜ ಅರಸರ ಸರಕಾರ ದಬ್ಬಾಳಿಕೆಯನ್ನು ಪ್ರೋತ್ಸಾಹಿಸುತ್ತಿದೆ

ದೇಶದಲ್ಲಿ ರಾಜಕೀಯ ಪರಿಸ್ಥಿತಿ ಅತ್ಯಂತ ಜಟಿಲವಾಗಿದೆ. ಸಮಾಜವಾದದ ಮಾತನ್ನಾಡುವ ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ರವರು, ಒಂದು ಕಡೆ ಹರಿಜನ, ಗಿರಿಜನ, ಶೋಷಿತರ ಬಗ್ಗೆ ಮಾತನಾಡುತ್ತಾರೆ, ಮತ್ತೊಂದು ಕಡೆ ಅವರ ಸರಕಾರ ಮಾಲೀಕರ ಪರವಾಗಿ ಸಂಪೂರ್ಣವಾಗಿ ಕೆಲಸಮಾಡುತ್ತಿದೆಯೆಂದುಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರಾದ ಶ್ರೀಮತಿ ಗೋದಾವರಿ ಪರುಳೇಕರ್‌ರವರು ಆಪಾದಿಸಿದರು. ಅವರು ಬೆಂಗಳೂರು ಜಿಲ್ಲಾ ರೈತಸಂಘದ 3ನೇ ಸಮ್ಮೇಳನದ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಮೇಲಿನಂತೆ ನುಡಿದರು. ತಾತಗುಣಿ ಎಸ್ಟೇಟಿನಲ್ಲಿ ನೂರಾರು ಹರಿಜನ ಕಾರ್ಮಿಕರು ಅದರಲ್ಲೂ ಶೇಕಡ 90ರಷ್ಟು ಮಹಿಳೆಯರು ಸಂಘಟಿತರಾಗಿ ತಮಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಹೋರಾಟಗಳನ್ನು ನಡೆಸುತ್ತಿದ್ದರೂ ಸರಕಾರ ಮೌನವಾಗಿದೆ. ಕಾರ್ಮಿಕರನ್ನು ಹತ್ತಿಕ್ಕಲು ಪೋಲೀಸರು ಕಳೆದ 5 ತಿಂಗಳಿಂದ ಎಸ್ಟೇಟಿನ ಬಳಿಯೇ ಬೀಡು ಬಿಟ್ಟಿದ್ದಾರೆ. ಬಹುರಾಷ್ಟ್ರೀಯ ಕಂಪನಿಯಾದ ಮೈಕೋ ಕಾರ್ಖಾನೆಯ ಏಳು ಸಾವಿರ ಕಾರ್ಮಿಕರು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಒಂದು ತಿಂಗಳಿಂದ ಹೋರಾಟ ನಡೆಸುತ್ತಿದ್ದರೂ, ಮಾಲೀಕರು ಕಾರ್ಮಿಕ ಮುಖಂಡರ ಜೀವ ತೆಗೆಯುವ ಬೆದರಿಕೆಗಳನ್ನು ಹಾಕುತ್ತಿದ್ದರೂ ಸರಕಾರ ಮಧ್ಯೆ ಪ್ರವೇಶಿಸದೆ ಮಾಲೀಕರಿಗೆ ಮಾತ್ರಪೋಲೀಸ್ ರಕ್ಷಣೆ ನೀಡುತ್ತಿರುವುದು ಶ್ರೀ ದೇವರಾಜ ಅರಸರ ಸರಕಾರ ದಬ್ಬಾಳಿಕೆಗೆ ಪ್ರೋತ್ಸಾಹ ಕೊಡುತ್ತಿದೆಯೆಂಬುದನ್ನು ತೋರಿಸುತ್ತದೆ ಎಂದರು.

ಇದೇ ಅಕ್ಟೋಬರ್ 27, 28 ರಂದು ಬೆಂಗಳೂರು ಜಿಲ್ಲಾ ರೈತಸಂಘದ ಮೂರನೇ ಸಮ್ಮೇಳನಕ್ಕೆ ಶ್ರೀಮತಿ ಗೋದಾವರಿ ಪರುಳೇಕರ್ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ ಇವರುಗಳು ಮುಖ್ಯ ಅತಿಥಿಗಳಾಗಿ ಬಂದಿದ್ದರು.

ಕರ್ನಾಟಕ ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ರೈತ, ಕಾರ್ಮಿಕರ ಮುಖಂಡ ಕಾಂ. ಎನ್. ಎಲ್. ಉಪಾಧ್ಯಾಯರು ಸಮ್ಮೇಳನವನ್ನು ಉದ್ಘಾಟಿಸುತ್ತಾ ರೈತಸಂಘದ ಮಹತ್ವವನ್ನು ವಿವರಿಸಿದರು. ಪ್ರಾರಂಭದಲ್ಲಿ ಕಾಂ. ಎ. ಕೆ. ಗೋಪಾಲನ್, ಹರೇಕೃಷ್ಣ ಕೋನಾರ್, ಜಯಪ್ರಕಾಶ್ ನಾರಾಯಣ್, ವೆಂಕಟಸ್ವಾಮಪ್ಪ, ವಾಸನ್ ಹಾಗೂ ಮಾರುತಿ ಗಣೇಶ್ ಪವಾರ್ ಮುಂತಾದ ರೈತರ ಸಂಘಟನೆಗೆ ದುಡಿದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಮ್ಮೇಳನಕ್ಕೆ ಶುಭ ಕೋರಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಶಾಖೆ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಸಿ. ಐ. ಟಿ. ಯು. ರಾಜ್ಯ ಸಮಿತಿಯ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್, ಕೋಲಾರ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣ ರೆಡ್ಡಿ, ಉತ್ತರ ಕನ್ನಡ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಸಮಿಉಲ್ಲಾ ಮತ್ತು ಹಳಿಯಾಳದ ಕಾಂ. ಉಡಚಪ್ಪಾ ಬೊಬಾಟಿ, ಬೀಡಿ ಫೆಡರೇಷನ್ ಕಾರ್ಯದರ್ಶಿ ಕಾಂ. ಮಹಮದ್ ದಸ್ತಗೀರ್, ದಲಿತ ಸಂಘರ್ಷ ಸಮಿತಿಯ ಮುಂದಾಳು ಕಾಂ. ಸಿದ್ದಲಿಂಗಯ್ಯ, ಭಾರತ ವಿದ್ಯಾರ್ಥಿ ಫೆಡರೇಶನ್ನಿನ, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಗೋಪಾಲ ಕೃಷ್ಣ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ಕಾಂ. ವೆಂಕಟೇಶ್‌ಮುಂತಾದವರು, ರೈತ ಕಾರ್ಮಿಕರ ಐಕ್ಯತೆಯ ಮಹತ್ವವನ್ನು ವಿವರಿಸಿದರು. ಬೆಂಗಳೂರು ಜಿಲ್ಲಾರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ್‌ರವರು ಕಳೆದ ಸಮ್ಮೇಳನದಿಂದ ಇಲ್ಲಿಯವರೆಗೆ ರೈತ ಸಂಘ ನಡೆಸಿದ ಹೋರಾಟಗಳನ್ನು ವಿವರಿಸುವ ಸಮಗ್ರ ವರದಿಯನ್ನು ಸಭೆಯ ಮುಂದಿಟ್ಟರು, ವರದಿಯ ಮೇಲೆ ಮುವತ್ತು ಪ್ರತಿನಿಧಿಗಳು ಚರ್ಚೆ ನಡೆಸಿದರು.

ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪ ಹಾಗೂ

ಗೋದಾವರಿ ಪರುಳೇಕರ್

ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್ ಸಮ್ಮೇಳನಕ್ಕೆ ಸೂಕ್ತ ಮಾರ್ಗದರ್ಶನ ನೀಡಿದರು.

ಸಮ್ಮೇಳನದಲ್ಲಿ ರೈತರಿಗೆ ಮುಖ್ಯವಾಗಿ ಬಾಧಿಸುತ್ತಿರುವ ಹನ್ನೆರಡು ಬೇಡಿಕೆಗಳನ್ನು ನಿರ್ಣಯಗಳನ್ನಾಗಿ ಸ್ವೀಕರಿಸಲಾಯಿತು. ಭೂ ಸುಧಾರಣೆ, ಹರಿಜನ, ಗಿರಿಜನರಿಗೆ ಆಗುತ್ತಿರುವ ಅನ್ಯಾಯ, ಕೃಷಿ ಕೂಲಿಗಾರರಿಗೆ ಕನಿಷ್ಟ ಕೂಲಿ, ರೈತರು ಬೆಳೆದ ಬೆಳೆಗಳಿಗೆ ನ್ಯಾಯಬೆಲೆ, ನೀರು ತೆರಿಗೆ ರದ್ದತಿ, ಜಮೀನು ದರಖಾಸ್ತು ವಿಷಯದಲ್ಲಿ ಆಗುತ್ತಿರುವ ಪಕ್ಷಪಾತ. ಭೂ ನ್ಯಾಯ ಮಂಡಳಿಗಳಲ್ಲಿ ಗೇಣಿದಾರರಿಗೆ ರಕ್ಷಣೆ ಸಿಗದಿರುವುದು, ಬಡ ರೈತರ ಮೇಲಿರುವ ಸರಕಾರೀ ಸಾಲದ ಹೊರೆಯನ್ನು ಇಳಿಸುವುದು ಮುಂತಾದ ನಿರ್ಣಯಗಳನ್ನು ಸ್ವೀಕರಿಸಲಾಯಿತು. ಕೆಂಗೇರಿ ಹೋಬಳಿ ಚನ್ನವೀರಯ್ಯನ ಪಾಳ್ಯದ ಗೇಣಿದಾರ ಶ್ರೀ ಬಸವಲಿಂಗಪ್ಪ ನಾಪತ್ತೆಯಾಗಿ ಎರಡು ತಿಂಗಳಾದರೂ ಪೋಲೀಸರು ಏನೂ ಕ್ರಮ ತೆಗೆದುಕೊಂಡಿಲ್ಲದಿರುವುದರ ಬಗ್ಗೆ ಸಮ್ಮೇಳನ ತೀವ್ರವಾಗಿ ಖಂಡಿಸಿತು.

ನಂತರ ನಡೆದ ಪದಾಧಿಕಾರಿಗಳ ಆಯ್ಕೆಯಲ್ಲಿ ಶ್ರೀ ಸಿ. ರಾಮಭದ್ರಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಉಪಾಧ್ಯಕ್ಷರಾಗಿ ಶ್ರೀ ಬಿ. ಕೆ. ರಾಮಯ್ಯ ಹಾಗೂ ಶ್ರೀ ಶಾಮಣ್ಣ ರೆಡ್ಡಿ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಪಿ. ಜಗನ್ನಾಥ್, ಕಾರ್ಯದರ್ಶಿಗಳಾಗಿ ಶ್ರೀ ವೀರಣ್ಣ, ಮನೋಹರ, ಲಕ್ಕಣ್ಣ ಹಾಗೂ ಕೋಶಾಧಿಕಾರಿಯಾಗಿ ಶ್ರೀನಿವಾಸ್ ರವರನ್ನು ಆಯ್ಕೆ ಮಾಡಲಾಯಿತು. ಇದಲ್ಲದೆ, ಇಪ್ಪತ್ತು ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ತಾರೀಖು 28-10-79 ರಂದು ರೈತರು, ಕೃಷಿ ಕೂಲಿಗಾರರು ಹಾಗೂ ಕಾರ್ಮಿಕರನ್ನು ಒಳಗೊಂಡ ಮೆರವಣಿಗೆ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಹೊರಟು, ನಗರದ ಪ್ರಮುಖ ಬೀದಿಗಳಿಂದ ಹಾದು ಚಿಕ್ಕಲಾಲ್ ಬಾಗ್‌ಗೆ ಬಂದು ಸೇರಿತು. ಅಲ್ಲಿಯೇ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು. ರಾಜ್ಯ ರೈತ ಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪನವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ, ಬೆಂಗಳೂರು ಜಿಲ್ಲಾ ರೈತಸಂಘದ ಅಧ್ಯಕ್ಷ ಸಿ. ರಾಮಭದ್ರಯ್ಯ, ಕಾಂ. ಗೋದಾವರಿ ಪರುಳೇಕರ್ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ ಮಾತನಾಡಿದರು. ಕಾಂ. ಚಾತುನ್ನಿ ಮಾಸ್ಟರ್‌ರವರು ಮಾತನಾಡುತ್ತಾ, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ, ಸ್ವಾತಂತ್ರ್ಯ ನಂತರ ರಾಜಮಹಾರಾಜರುಗಳ ವಿರುದ್ಧ ಹಾಗೂ ಕಿಸಾನ್ ಸಭಾದ ಸ್ಥಾಪನೆಯಾದಾಗಿನಿಂದ ಭೂಮಾಲೀಕ ಬಂಡವಾಳಶಾಹಿಗಳ ವಿರುದ್ಧ ಹೋರಾಡುವ ನಾವು ಈಗಿನ ಸಂದಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಜಾತೀಯವಾದಿ ಶಕ್ತಿಗಳು ಹಾಗೂ ಸರ್ವಾಧಿಕಾರಿ ಶಕ್ತಿಗಳನ್ನು ನಿರ್ನಾಮ ಮಾಡಲು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಒಕ್ಕೂಟ ರಚಿಸಲು ನಾವೆಲ್ಲಾ ಪ್ರಯತ್ನಿಸಬೇಕೆಂದರು. ದೇಶದ ವಿಶಾಲ ಜನ ಭಾಗವನ್ನು ಒಳಗೊಂಡಿರುವ ರೈತರನ್ನು ಸಂಘಟಿಸಿ, ಅವರ ಹಕ್ಕುಗಳಿಗಾಗಿ ಹೋರಾಡಲು ಕಿಸಾನ್ ಸಭಾವನ್ನು ಬಲಪಡಿಸಬೇಕೆಂದು ಎಲ್ಲಾ ದೇಶಪ್ರೇಮಿಗಳಲ್ಲಿ, ಅದರಲ್ಲೂ ಕರ್ನಾಟಕದ ಜನತೆಗೆ ಮನವಿ ಮಾಡಿಕೊಂಡರು.

ಕೊನೆಯಲ್ಲಿ ವಂದಿಸಿದ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್‌ರವರು, ತಾತಗುಣಿ ಎಸ್ಟೇಟ್ ಕಾರ್ಮಿಕರು ನವೆಂಬರ್ ಮೊದಲ ವಾರದಲ್ಲಿ ಬೆಂಗಳೂರಿಗೆ ಬಂದು, ಪ್ರತಿದಿನ ನಗರದ ಬೀದಿಗಳಲ್ಲಿ ತಮ್ಮ ಶೋಷಣೆಯನ್ನು ಜನಗಳಿಗೆ ತಿಳಿಸಿ, ಜನತೆಯ ಸಹಾಯದಿಂದ ಜಯಗಳಿಸುವವರೆಗೆ ಬೆಂಗಳೂರಿನಲ್ಲಿಯೇ ಉಳಿಯುತ್ತಾರೆಂದು ತಿಳಿಸಿ, ಇದಕ್ಕಾಗಿ ಎಲ್ಲರೂ ಸಹಾಯ ಮಾಡಬೇಕೆಂದು ಕೋರಿಕೊಂಡರು.

ತುಮಕೂರು ಜಿಲ್ಲಾ ಎರಡನೇ ರೈತ ಸಮ್ಮೇಳನ

"ಸಂಘಟನೆಯನ್ನು ಬಲಪಡಿಸಲು ಕರೆ"

ಜಿಲ್ಲೆಯಾದ್ಯಂತ ರೈತರನ್ನು ಸಂಘಟಿಸಿ ಅವರ ಬೇಡಿಕೆಗಳ ಆಧಾರದ ಮೇಲೆ ಹೋರಾಟಗಳನ್ನು ನಡೆಸುವುದರಿಂದ ಮಾತ್ರ ರೈತರ ಸಂಘಟನೆ ಬೆಳೆಯಲು ಸಾಧ್ಯ. ಈ ಬಗ್ಗೆ ಕೂಡಲೇ ಕಾರ್ಯಕ್ರಮವನ್ನು ಹಾಕಿ ಹಳ್ಳಿಹಳ್ಳಿಗೆ ಸಂಘಟನೆಯನ್ನು ತೆಗೆದುಕೊಂಡು ಹೋಗಿ ಎಂದು ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ರೈತರಿಗೆ ಕರೆ ನೀಡಿದರು. ಅವರು ಅಕ್ಟೋಬರ್ 23, 24ರಂದು ಕುಣಿಗಲ್‌ನಲ್ಲಿ ನಡೆದ ತುಮಕೂರು ಜಿಲ್ಲಾ ಎರಡನೇ ರೈತ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮೇಲಿನಂತೆ ನುಡಿದರು.

ತಾ. 23 ರಂದು ಬೆಳಿಗ್ಗೆ ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನ ಪ್ರಾರಂಭವಾಯಿತು. ಖ್ಯಾತ ಕವಿ ಹಾಗೂ ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ. ವಿ. ಚಿಕ್ಕವೀರಯ್ಯನವರು ಕೆಂಪು ಬಾವುಟವನ್ನು ಹಾರಿಸಿದರು.

ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಚೆನ್ನಪ್ಪನವರು ಜಿಲ್ಲೆಯಲ್ಲಿ ರೈತ ಸಂಘಟನೆಯ ಸೂಕ್ಷ್ಮ ಪರಿಚಯ, ಹೋರಾಟಗಳನ್ನು ವಿವರಿಸುವ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ 23 ಜನ ಪ್ರತಿನಿಧಿಗಳು ಭಾಗವಹಿಸಿ, ಸಂಘಟನೆಯನ್ನು ಬಲಪಡಿಸಲು ತಮ್ಮ ಸಲಹೆ, ಸೂಚನೆಯನ್ನು ನೀಡಿದರು.

ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪನವರು ಮಾತನಾಡುತ್ತಾ, ರಾಜ್ಯಾದ್ಯಂತ ನಡೆಯುತ್ತಿರುವ ರೈತರ ಹೋರಾಟಗಳ ವಿವರವನ್ನು ಪ್ರತಿನಿಧಿಗಳಿಗೆ ನೀಡಿ, ತುಮಕೂರು ಜಿಲ್ಲೆಯಲ್ಲಿಯೂ ಪ್ರಬಲವಾದ ರೈತ, ಕೃಷಿ ಕೂಲಿಗಾರರ ಹೋರಾಟ ಬೆಳೆದು ಬರಲು ಸಮ್ಮೇಳನ ಸಹಾಯವಾಗುತ್ತದೆಂದು ಆಶಿಸಿದರು.

ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಕಾಂ. ಕೆ.ಆರ್. ನಾಯಕ್, ಭಾರತ ವಿದ್ಯಾರ್ಥಿ ಫೆಡರೇಷನ್ನಿನ ರಾಜ್ಯಶಾಖೆ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್, ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿ ಹಾಗೂ ರಾಜ್ಯ ಬೀಡಿ ಫೆಡರೇಷನ್ನಿನ ಅಧ್ಯಕ್ಷ ಕಾಂ. ಮೊಹಮ್ಮದ್ ದಸ್ತಗೀರ್ ಸಮ್ಮೇಳನಕ್ಕೆ ಯಶಸ್ಸು ಕೋರಿ ಮಾತನಾಡಿದರು.

ಜಿಲ್ಲಾ ಸಮಿತಿ ಪದಾಧಿಕಾರಿಗಳ ಆಯ್ಕೆ ನಡೆದು, ಕಾಂ. ವಿ. ಚಿಕ್ಕವೀರಯ್ಯನವರು ಅಧ್ಯಕ್ಷರಾಗಿ, ಕಾಂ. ಹೆಚ್. ಸಿ. ಚೆನ್ನಪ್ಪನವರು ಕಾರ್ಯದರ್ಶಿ, ಕಾಂ. ಚನ್ನಬಸವಣ್ಣ ಜಂಟಿ ಕಾರ್ಯದರ್ಶಿಯಾಗಿ ಹಾಗೂ ಕಾಂ. ಲಿಂಗದೇವರು ಖಜಾಂಚಿಗಳಾಗಿಯೂ ಆಯ್ಕೆಯಾದರು. ಅಲ್ಲದೇ 12 ಜನರ ಕಾರ್ಯಕಾರಿ ಸಮಿತಿಯನ್ನೂ ಸಹಾ ರಚಿಸಲಾಯಿತು.

ಸಮ್ಮೇಳನದಲ್ಲಿ ಒಟ್ಟು ಹದಿನೈದು ನಿರ್ಣಯಗಳು ಸ್ವೀಕಾರವಾದವು. ಅವುಗಳಲ್ಲಿ ಮುಖ್ಯವಾಗಿ ತಾತಗುಣಿ ಎಸ್ಟೇಟ್ ಕಾರ್ಮಿಕರು ಹಾಗೂ ಮೈಕೋ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವುದು. ಜಿಲ್ಲೆಗೆ ಹೇಮಾವತಿ ನದಿ ನೀರನ್ನು ಒದಗಿಸುವುದು, 5 ಎಕರೆ ನೀರಾವರಿ ಜಮೀನು ಇರುವವರಿಗೆ ಹಾಗೂ 20 ಎಕರೆ ಖುಷ್ಕಿ ಜಮೀನು ಇರುವವರಿಗೆ ಕಂದಾಯ ರದ್ದು ಮಾಡುವುದು, ರೈತರು ಬೆಳೆದ ಬೆಳೆಗಳಿಗೆ ನ್ಯಾಯಬೆಲೆ ಸಿಗುವಂತೆ ಮಾಡುವುದು, ಹರಿಜನ ಗೇಣಿದಾರರಿಗೆ ಹಾಗೂ ಬಡವರಿಗೆ ಸವರ್ಣೀಯರಿಂದ ರಕ್ಷಣೆ, ಅಗ್ಗದ ದರದಲ್ಲಿ ವಿದ್ಯುಚ್ಛಕ್ತಿಯನ್ನು ರೈತರಿಗೆ ಒದಗಿಸುವುದು, ಭೂ ನ್ಯಾಯ ಮಂಡಳಿಗಳಲ್ಲಿ ಎಲ್ಲಾ ರೈತಸಂಘಟನೆಗಳ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಹಾಗೂ ಹೆಚ್ಚುವರಿ ಭೂಮಿಯನ್ನು ಬಡ ರೈತರಿಗೆ ಹಂಚುವ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ತಾ. 24ರಂದು ಸಂಜೆ ರೈತ ಕಾರ್ಮಿಕರ ಮೆರವಣಿಗೆಯ ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಚೆನ್ನಪ್ಪ, ಕಾಂ. ಕೆ. ಆರ್. ನಾಯಕ್, ಕಾಂ. ಮೊಹಮ್ಮದ್ ದಸ್ತಗೀರ್ ಹಾಗೂ ಪ್ರಾಂತ ರೈತಸಂಘದ ಪ್ರಧಾನ

[ಕಡೆಯ ಪುಟ ನೋಡಿ]

ಬೆಲೆ ಏರಿಕೆಯನ್ನು ತಡೆಯಲು ಪ. ಬಂಗಾಳದ 14 ಅಂಶಗಳ ಸಲಹೆ

ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಪ. ಬಂಗಾಳದ ಮುಖ್ಯ ಮಂತ್ರಿ ಕಾಂ. ಜ್ಯೋತಿಬಸು ಅವರು ಸಧ್ಯದ ಬೆಲೆಏರಿಕೆಯಿಂದಮಧ್ಯಮ ಹಾಗೂ ಶ್ರಮಿಕವರ್ಗಗಳ ಜನಕೋಟಿಗೆ ಅಪಾರ ಕಷ್ಟನಷ್ಟಗಳಾಗುವುದೆಂದೂ, ಪಂಚವಾರ್ಷಿಕ ಯೋಜನೆಯಲ್ಲಿ ಉದ್ದೇಶಿಸಲಾದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಗಿತಗೊಳ್ಳುವುದೆಂದೂ, ಆರ್ಥಿಕ ದುಃಸ್ಥಿತಿಯು ಇನ್ನಷ್ಟೂ ರಾಜಕೀಯ ಅಸ್ಥಿರಕ್ಕೆ ಎಡೆಕೊಟ್ಟು ಸರ್ವಾಧಿಕಾರಿ ಶಕ್ತಿಗಳು ಜನರ ಆಶೋತ್ತರಗಳನ್ನು ಹತ್ತಿಕ್ಕಲು ಮತ್ತೆ ತಲೆಎತ್ತುವುವೆಂದೂ ಮುನ್ನೆಚ್ಚರಿಕೆ ನೀಡಿದರು. ಎಡರಂಗ ಸರಕಾರವು ಬೆಲೆಏರಿಕೆಯನ್ನು ತಡೆಯಲು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲಾ ಕ್ರಮಗಳನ್ನೂ ತೆಗೆದುಕೊಂಡಿದೆ. ಕೇಂದ್ರದ ಸಹಾಯ ಇಲ್ಲದೆ ಹೆಚ್ಚಿನ ಆಹಾರಧಾನ್ಯಗಳನ್ನೂ, ಬೇಳೆಕಾಳುಗಳನ್ನೂ, ಸಕ್ಕರೆಯನ್ನೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ರಾಜ್ಯ ಸರಕಾರದ ಸಹಾಯ ಧನದಿಂದ ಸುಲಭ ಬೆಲೆಗಳಲ್ಲಿ ಈಗಾಗಲೇ ಜನರಿಗೆ ಒದಗಿಸಲಾಗುತ್ತಿದೆ. ವ್ಯಾಪಾರಿಗಳು, ದಳ್ಳಾಳಿಗಳು ಅವಶ್ಯಕ ಸಾಮಗ್ರಿಗಳ ಸರಬರಾಜನ್ನು ರೈಲ್ವೆ ಗಾಡಿಗಳಿಂದ ಸಮಯಕ್ಕೆ ಸರಿಯಾಗಿ ಬಿಡಿಸಿಕೊಳ್ಳದೆ ಕೃತಕ ಕೊರತೆ ಪರಿಸ್ಥಿತಿಯನ್ನುಂಟುಮಾಡುವುದ್ರರ ವಿರುದ್ಧ ಎಡರಂಗ ಸರಕಾರವು ಕಠಿಣ ಕ್ರಮ ಕೈಗೊಳ್ಳುತ್ತಿದೆ. ಲಾಭಕೋರರ, ಕಳ್ಳಸಂತೆ ಕದೀಮರ ಮತ್ತು ಇತರ ಆರ್ಥಿಕ ಅಪರಾಧಿಗಳ ವಿರುದ್ಧವೂ ಎಡರಂಗ ಸರಕಾರವು ಕಠಿಣ ಕ್ರಮಕೈಗೊಳ್ಳುತ್ತಿದೆ. ಇಂತಹ ಕೆಲವು ಅಪರಾಧಿಗಳನ್ನು ಹಸ್ತಗಿರಿ ಮಾಡಿದೆ. ಕೇಂದ್ರದ ಆದೇಶದಂತೆ, ಅವಶ್ಯಕ ಸಾಮಗ್ರಿಗಳ ಕಾಯಿದೆ, ದಾಸ್ತಾನು ನಿಯಂತ್ರಣ ಆದೇಶ ಮತ್ತು ಸರಕುಗಳ ಶೇಖರಣೆಯುಪ್ರಕಟಣಾಆದೇಶಗಳನ್ನೂ ಕಟ್ಟುನಿಟ್ಟಾಗಿ ಎಡರಂಗ ಸರಕಾರವು ಪಾಲಿಸುವುದೆಂದು ಕಾಂ. ಜ್ಯೋತಿಬಸು ಅವರು ಅಧಿವೇಶನದಲ್ಲಿ ತಿಳಿಸಿದ್ದಾರೆ. ಆದರೆ, ಆರ್ಥಿಕ ಅಪರಾಧಿಗಳನ್ನು ಶಿಕ್ಷಿಸುವ ಹಾಗೂ ಬೆಲೆಏರಿಕೆಯನ್ನು ತಡೆಯುವ ನೆಪದಲ್ಲಿ ಪ್ರತಿಬಂಧಕ ಸ್ಥಾನಬದ್ಧತಾ ಕಾಯ್ದೆಯು (PDA) ಅಗತ್ಯವಿಲ್ಲವೆಂದೂ, ಅಂತಹ ಕಾಯ್ದೆಯನ್ನು ಎಡರಂಗ ಸರಕಾರವು ಜಾರಿಗೆ ತರುವುದಿಲ್ಲವೆಂದೂ, ಅಂತಹ ಕಾಯ್ದೆಯು ರಾಜಕೀಯ ದುರುಪಯೋಗವಾಗುವ ಸಂಭವವಿರುವುದೆಂದೂ ಅಭಿಪ್ರಾಯಪಟ್ಟರು. ಅಂತಿಮವಾಗಿ ಬೆಲೆನಿಯಂತ್ರಣದ ಹೊಣೆಗಾರಿಕೆಯು ಕೇಂದ್ರ ಸರಕಾರದ್ದೇ ಆಗಿರುವುದರಿಂದ ತಮ್ಮ ಎಡರಂಗ ಸರಕಾರದ ಪರವಾಗಿ 14 ಅಂಶಗಳ ಸಲಹೆಯನ್ನು ಸಮ್ಮೇಳನದಲ್ಲಿ ಮಂಡಿಸಿದರು. ಸಲಹೆಯ ಮುಖ್ಯಾಂಶಗಳು ಹೀಗಿವೆ:

1. ಕೇಂದ್ರ ಸರಕಾರವು ಈ ಕೂಡಲೇ ಪ್ರಾಮುಖ್ಯವಾದ ಆಹಾರ ಧಾನ್ಯಗಳು, ಬೇಳೆಕಾಳುಗಳು, ಉಪ್ಪು, ಸಕ್ಕರೆ, ಬಟ್ಟೆಗಳು, ಅಡುಗೆ ತೈಲ, ಸೀಮೆಎಣ್ಣೆ, ಬೆಂಕಿಪೆಟ್ಟಿಗೆ, ಕಾಗದ ಮತ್ತು ಒಗೆಯುವ ಸಾಬೂನು ಇವುಗಳನ್ನು ಒಳಗೊಂಡು ವ್ಯಾಪಕವಾದ ಸಾರ್ವಜನಿಕ ಖರೀದಿ ಮತ್ತು ವಿತರಣೆಯನ್ನು ಕೈಗೊಳ್ಳಬೇಕು. ಈ ಎಲ್ಲಾ ಅವಶ್ಯಕ ವಸ್ತುಗಳು ದೇಶಾದ್ಯಂತ ಸಮಾನ ಬೆಲೆಗಳಲ್ಲಿ ಗ್ರಾಹಕರಿಗೆ ದೊರೆಯುವಂತೆ ಮಾಡಬೇಕು.

2. ಸಾರ್ವಜನಿಕ ಖರೀದಿ ಮತ್ತು ವಿತರಣಾ ವ್ಯವಸ್ಥೆಯನ್ನು ಸಾಕಷ್ಟು ಸಹಾಯಧನ (subsidy) ನೀಡಿ ಯಶಸ್ವಿಯಾಗಿ ಕಾರ್ಯಗತಗೊಳಿಸಲು ರೂ. 500 ಕೋಟಿಯ ಒಂದು ವಿಶೇಷ ನಿಧಿಯನ್ನು ಮೀಸಲಾಗಿರಿಸಬೇಕು. ರಫ್ತುದಾರರಿಗೆ, ಕೈಗಾರಿಕೋದ್ಯಮಿಗಳಿಗೆ, ದೊಡ್ಡ ಭೂಮಾಲಕರಿಗೆ ಮತ್ತು ಶ್ರೀಮಂತ ರೈತರಿಗೆ ಈ ವರುಷದ ಕೇಂದ್ರ ಮುಂಗಡಪತ್ರದಲ್ಲಿ ಸೂಚಿಸಿದ ಸಹಾಯಧನದಲ್ಲಿ ಸಾಕಷ್ಟು ಕಡಿಮೆಮಾಡಿ, ಸಾರ್ವಜನಿಕ ಖರೀದಿ ಮತ್ತು ವಿತರಣಾ ವ್ಯವಸ್ಥೆಗೆ ಸಹಾಯಧನ ಒದಗಿಸಲು ಬೇಕಾದ ವಿಶೇಷ ನಿಧಿಗೆ ಹಣ ಒದಗಿಸಬೇಕು.

3. ಮುಂದಿನ ಹನ್ನೆರಡು ತಿಂಗಳುಗಳಲ್ಲಿ ಖಾದ್ಯತೈಲ ಮುಂತಾದ ಅವಶ್ಯಕ ಸಾಮಗ್ರಿಗಳ ಆಮದಿಗಾಗಿ, ರೂ. 100 ಕೋಟಿಯಷ್ಟು ವಿದೇಶಿ ವಿನಿಮಯವನ್ನು ಮೀಸಲಾಗಿರಿಸಬೇಕು.

4. ಮುಂದೆ ಆದೇಶ ನೀಡುವವರೆಗೆ, ಆಹಾರ ವಸ್ತುಗಳ ಹಾಗೂ ಇತರ ಕೊರತೆಯ ಸಾಮಗ್ರಿಗಳ ಎಲ್ಲಾ ರಫ್ತು ವ್ಯಾಪಾರಗಳನ್ನು ನಿಶೇಧಿಸಬೇಕು. ಹಾಗೆಯೇ ಸಕ್ಕರೆಯ ರಫ್ತನ್ನೂ ನಿಶೇಧಿಸಬೇಕು.

5. ಈ ವರುಷದ ಕೇಂದ್ರಮುಂಗಡಪತ್ರದಲ್ಲಿ ಸಕ್ಕರೆ ರಫ್ತಿಗಾಗಿ ಮೀಸಲಾಗಿರಿಸಿದ ಸಹಾಯ ಧನವನ್ನೆಲ್ಲಾ ಸಾರ್ವಜನಿಕರಿಗೆ ಸಕ್ಕರೆ ಕಿಲೋ ಒಂದಕ್ಕೆ ರೂ. 2-50ರಲ್ಲಿ ಸರಬರಾಜು ಮಾಡಲಿಕ್ಕೆ ಉಪಯೋಗಿಸಬೇಕು. ಅಲ್ಲದೆ, ಕಳೆದ ವರ್ಷದವರೆಗೆ ಇದ್ದ ಸಕ್ಕರೆ ನಿಯಂತ್ರಣವನ್ನು ಪುನಃ ಜಾರಿಗೆ ತರಬೇಕು. ಸಕ್ಕರೆಯ ಒಟ್ಟು ಉತ್ಪಾದನೆಯ ಶೇ. 80 ರಷ್ಟನ್ನು ಸಾರ್ವಜನಿಕ ವಿತರಣೆಗಾಗಿ ಮೀಸಲಾಗಿರಿಸಬೇಕು.

6. ಕಲ್ಲಿದ್ದಲಿನ ಬೆಲೆಯನ್ನು ಕಳೆದ ಜುಲೈ 17ರ ಪೂರ್ವಕ್ಕಿದ್ದಷ್ಟಕ್ಕೇ ಇಳಿಸಬೇಕು. ಹಾಗೆಯೇ ಬಟ್ಟೆಗಳ, ಪೆಟ್ರೋಲಿಯಂ ಪದಾರ್ಥಗಳ ಮತ್ತು ಬೆಂಕಿಪೆಟ್ಟಿಗೆಗಳ ಬೆಲೆಗಳನ್ನು ಈ ವರ್ಷದ ಕೇಂದ್ರ ಮುಂಗಡ ಪತ್ರದ ಪೂರ್ವಕ್ಕಿದ್ದಷ್ಟಕ್ಕೆ ಇಳಿಸಬೇಕು. ಈ ದಿಸೆಯಲ್ಲಿ ಅವುಗಳ ಮೇಲೆ ವಿಧಿಸಿದ ಅಬಕಾರಿ ತೆರಿಗೆಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬೇಕು.

7. ಆಮದು ಮಾಡಿದ ಅಡುಗೆ ತೈಲಗಳನ್ನು ಮುಖ್ಯವಾಗಿ ಮುಂಬಯಿ ಮಾರುಕಟ್ಟೆಯಲ್ಲಿ ಖಾಸಗೀ ವ್ಯಾಪಾರಿಗಳಿಗೆ ಹರಾಜು ಮಾಡಿಬಿಡುವ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಶನ್ನಿನ (STC) ಸಧ್ಯದ ಧೋರಣೆಯನ್ನು ಬದಲಾಯಿಸಬೇಕು. ಆಮದು ಮಾಡಿದ ಎಲ್ಲಾ ತೈಲಗಳನ್ನೂ ಅಡುಗೆತೈಲಗಳನ್ನೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕವೇ ಹರಿಯಗೊಡಬೇಕು.

8. ಕೇಂದ್ರ ಸರಕಾರವು ರೈಲ್ವೆ ಸಾಗಾಟಗಳು ಉತ್ತಮಗೊಳ್ಳುವಂತೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂದರ್ಭದಲ್ಲಿ ರೈಲ್ವೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಪರಿಶೀಲಿಸಬೇಕು.

9. ಏಕಸ್ವಾಮ್ಯ ಹಾಗೂ ಭಾರೀ ದೊಡ್ಡ ಕೈಗಾರಿಕಾ ಕುಟುಂಬಗಳ ನ್ಯಾಯಯುತ ಸಾಲ ಸೌಕರ್ಯಗಳನ್ನು ಪೂರೈಸಬೇಕಾದರೂ, ಅವುಗಳು ರಿಸರ್ವ್ ಬ್ಯಾಂಕಿನ ಸಾಲ ನಿಯಂತ್ರಣ ನಿರ್ದೇಶನದ ವಿರುದ್ಧ ಬ್ಯಾಂಕುಗಳಲ್ಲಿ ಹೊಸ ಖಾತೆಯನ್ನು ತೆರೆದು ಹೊಸಸಾಲ ಸೌಕರ್ಯಗಳನ್ನು ಪಡೆಯುವ ಕುಂತತ್ರವನ್ನು ತಡೆಯಬೇಕು.

10. ಕಳೆದ ಎರಡು ವರ್ಷಗಳಲ್ಲಿ ಅತ್ಯಧಿಕ ಮಟ್ಟದಲ್ಲಿ ಸಾಲಸೌಲಭ್ಯಗಳ ಬಳಕೆಯ ಸರಾಸರಿ ಶೇ. 80 ರಷ್ಟಕ್ಕೇ ಈ ವರ್ಷ ಸಾಲಮಿತಿ ಇರಬೇಕೆಂಬ ಸಾಲ ನಿಯಂತ್ರಣ ನೀತಿಯನ್ನು ಎಲ್ಲಾ ಸಂಸ್ಥೆಗಳಿಗೂ ಕಟ್ಟುನಿಟ್ಟಾಗಿ ಅನ್ವಯಿಸಬಾರದು. ರೋಗಗ್ರಸ್ಥ ಸಂಸ್ಥೆಗಳಿಗೆ, ಸಣ್ಣ ಉದ್ಯಮಗಳ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಿಗೆ ಬ್ಯಾಂಕುಗಳು ಈ ಸಾಲ ನಿಯಂತ್ರಣ ನೀತಿಯಿಂದ ಸಾಕಷ್ಟು ರಿಯಾಯತಿ ನೀಡಲು ಅಧಿಕಾರ ಹೊಂದಿರಬೇಕು.

11. ಸ್ವಯಂ ಉದ್ಯೋಗಾವಕಾಶಗಳಿಗೂ, ಉದ್ಯೋಗಾವಕಾಶವನ್ನು ಹೆಚ್ಚಿಸುವ ಕಾರ್ಯಕ್ರಮಗಳಿಗೂ ಮತ್ತು ಸಣ್ಣ ಉದ್ಯಮ ಕ್ಷೇತ್ರಕ್ಕೂ ನೀಡುತ್ತಿರುವ ಸಾಲಸೌಲಭ್ಯಗಳಲ್ಲಿ ಕಡಿತ ಮಾಡಬಾರದು. ಹಾಗೆಯೇ, ಸಣ್ಣ ವ್ಯವಸಾಯಗಾರರಿಗೆ, ಪಾಲುಬೆಳೆಗಾರರಿಗೆ, ಮರುವಿತರಣೆ ಮಾಡಿದ ಭೂಮಿಯ ವಾರಸುದಾರರಿಗೆ, ಸಣ್ಣ ಕೈಕುಶಲ ಕೆಲಸಗಾರರಿಗೆ ಮತ್ತು ಬಡ ಹಾಗೂ ದುರ್ಬಲ ವರ್ಗದವರಿಗೆ ಒದಗಿಸುತ್ತಿರುವ ಸಾಲ ಸಹಾಯಗಳಲ್ಲಿ ಕಡಿತ ಮಾಡಬಾರದು.

12. ಸಾರ್ವತ್ರಿಕ ಸಾಲ ನಿಯಂತ್ರಣದ ನೆಪದಲ್ಲಿ ರಿಯಾಯತಿ ದರಗಳಲ್ಲಿ (Differential Rate of Interest) ಸಾಲ ನೀಡುವ ಯೋಜನೆಯಲ್ಲಿ ಕಡಿತ ಮಾಡಬಾರದು.

13. ಆಹಾರಧಾನ್ಯಗಳ ಖರೀದಿಗೆ ಸಾಕಷ್ಟು ಸಾಲಸೌಲಭ್ಯಗಳು ಸಿಗುವಂತೆ ಸರಕಾರದ ಸಾಲ ಧೋರಣೆಯನ್ನು ಮರುಪರಿಶೀಲಿಸಬೇಕು.

14. ಸಾರ್ವಜನಿಕ ವಿತರಣೆಯ ಮತ್ತು ಕೆಲಸಕ್ಕೆ-ಕಾಳು ಕಾರ್ಯಕ್ರಮಗಳಿಗೆ ಕೇಂದ್ರದ ಸಂಗ್ರಹಣೆಯಿಂದ ಭಾರೀ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಬೇಕು.

●

“ಕೊಳೆತ ಸಮಾಜ ವ್ಯವಸ್ಥೆಯ ಬದಲಾವಣೆಗಾಗಿ ಚಿಂತಿಸಿ”

—ಕೆ. ರಾಮಚಂದ್ರ ಉಡುಪ

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್. ಎಫ್. ಐ.) ದ ಆಶ್ರಯದಲ್ಲಿ 3-10-79 ರಂದು “ಸಮಾಜ-ಬದಲಾವಣೆ-ವಿದ್ಯಾರ್ಥಿ” ಎಂಬ ವಿಷಯದ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ರಾಷ್ಟ್ರಪ್ರಶಸ್ತಿ ವಿಜೇತ ಕೋಟ ವಿವೇಕ ಜೂನಿಯರ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ. ರಾಮಚಂದ್ರ ಉಡುಪ ಅವರು ಇಂದಿನ ಕೊಳೆತ ಸಮಾಜ ವ್ಯವಸ್ಥೆಯ ಬದಲಾವಣೆಗಾಗಿ ವಿದ್ಯಾರ್ಥಿಗಳು, ಯುವಜನರು ಚಿಂತಿಸಬೇಕೆಂದು ಕೇಳಿಕೊಂಡರು. “...ಹಳೇ ತಲೆಗಳಿಂದ ಬದಲಾವಣೆ ಸಾಧ್ಯವಿಲ್ಲ. ವಿದ್ಯಾರ್ಥಿಗಳು, ಯುವಕರು ಸಂಘಟಿತರಾಗಿ ಸೀಮಿತವರ್ಗದವರ ಹಿತರಕ್ಷಣೆಗಾಗಿ ಇರುವ ಈಗಿನ ವ್ಯವಸ್ಥೆಯನ್ನು ಬದಲಾಯಿಸಬೇಕು...” ಎಂದವರು ಕರೆನೀಡಿದರು.

“...ಒಂದೇ ರೀತಿಯ ಆಚಾರ, ವಿಚಾರ, ನಡೆ, ನುಡಿ, ಹಬ್ಬ ಹರಿದಿನಗಳನ್ನು ಆಚರಿಸುವ ಜನರ ಗುಂಪನ್ನು ಸಮಾಜವೆನ್ನುತ್ತೇವೆ. ಆದರೆ ನಾನು ಹೇಳುವ ಸಮಾಜದಲ್ಲಿ ಜಾತಿ, ದೇವರು, ಭಾಷೆಗಳೆಲ್ಲಕ್ಕಿಂತ ಮುಖ್ಯವಾದದ್ದು ಅಲ್ಲಿ ನಡೆಯುವ ಆರ್ಥಿಕ ಚಟುವಟಿಕೆ. ಇಂದು ನಮ್ಮ ಆರ್ಥಿಕತೆ ಕೆಲವೇ ಜನರ ಹಾಗೂ ಅವರ ವಂಶದ ಕೈಯಲಿದ್ದು, ಬಹುಪಾಲು ಜನತೆ ಬಡತನದ ಜೀವನ ನಡೆಸುತ್ತಿದ್ದಾರೆ. ನಮ್ಮ ದೇವರು, ಮಠಗಳು ಹಣ ಮಾಡುವ ಕಾರ್ಖಾನೆಗಳಾಗಿವೆ. ಪ್ರತಿಯೊಂದು ಕ್ಷೇತ್ರದಲ್ಲೂ ಸ್ಥಾಪಿತ ಹಿತಾಸಕ್ತಿಗಳು ತಲೆಯೆತ್ತುತ್ತಿವೆ. ಎಂಜಿಲನ್ನಕ್ಕಾಗಿ ಪ್ರಾಣಿಗಳೊಂದಿಗೆ ಹೋರಾಡುತ್ತಿರುವ ದೃಷ್ಯ ನಮ್ಮ ದೇಶದಲ್ಲಿ ಸರ್ವಸಾಮಾನ್ಯವಾದದ್ದು...” ಎಂದು ಉಡುಪರು ತೀರಾ ವ್ಯಸನದಿಂದ ಹೇಳಿದರು.

ಶಿಕ್ಷಣ ಕ್ಷೇತ್ರದ ಬಗ್ಗೆ ರಾಮಚಂದ್ರ ಉಡುಪರದ್ದು ನೇರ ಹಾಗೂ ನಿರ್ದಾಕ್ಷಿಣ್ಯ ವಿಮರ್ಶೆ. “...ಇಂದು ವಿದ್ಯೆ ಯಾರಿಗೆ ಬೇಕಾಗಿದೆ? ಸರಕಾರವು ಬರೇ ಅಂಕಿ ಅಂಶದಿಂದ ತೃಪ್ತವಾದರೆ, ತಂದೆ ತಾಯಿಗಳಿಗೆ ಬೇಕಾಗಿರುವುದು ಬರಿ ಡಿಗ್ರಿ ಮಾತ್ರ. ಶಿಕ್ಷಣ ಕ್ಷೇತ್ರದಲ್ಲಿ ಭಾರಿ ದೊಡ್ಡ ಮೋಸ ನಡೆಯುತ್ತಿದೆ. ಇಲ್ಲೂ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿದೆ. ಡೊನೇಶನ್‌ಗಾಗಿ ಬಾಯಿಬಿಡುವ ಮ್ಯಾನೇಜ್‌ಮೆಂಟುಗಳು, ವಾರಕ್ಕೊಮ್ಮೆ ಕಾಲೇಜಿಗೆ ಬರುವ ಪ್ರಿನ್ಸಿಪಾಲರುಗಳು, ಯಾವುದೋ ಹಳೆಯ ನೋಡ್ಸ್‌ಗಳನ್ನು ಓದಿ ಹೇಳುವ ಲೆಕ್ಚರರ್‌ಗಳು ಇರುವ ವ್ಯವಸ್ಥೆಯಲ್ಲಿ ರೋಸಿಹೋದ ವಿದ್ಯಾರ್ಥಿಗಳು ದಂಗೆ ಏಳುವುದರಲ್ಲಿ ಕಲ್ಲು ತೂರುವುದರಲ್ಲಿ ವಿಶೇಷವೇನಿದೆ?” ಎಂದವರು ಪ್ರಶ್ನಿಸಿದರು.

“...ಈಗಿರುವ ವ್ಯವಸ್ಥೆಯಲ್ಲಿ ಹಾಯಾಗಿ ಜೀವನ ಸಾಗಿಸುತ್ತಿರುವವರಿಗೆ ಬದಲಾವಣೆ ಬೇಡವಾಗಿದೆ...” ಎಂದ ಉಡುಪರು, ರಾಜಕೀಯ ಮತ್ತು ನೈತಿಕ ಮಟ್ಟ ಕುಸಿದಿರುವ ಈ ಕಾಲಘಟ್ಟದಲ್ಲಿ ಯುವಜನತೆ ಜಾಗೃತವಾಗಿ, ಚಿಂತಿಸಿ, ಸಂಘಟಿತರಾಗಿ ಬದಲಾವಣೆಯ ದಾರಿ ಹುಡುಕಬೇಕೆಂದು ಕೇಳಿಕೊಂಡರು.

ಸಭೆಯ ಅಧ್ಯಕ್ಷತೆವಹಿಸಿದ್ದ ನ್ಯಾಯವಾದಿ ಶ್ರೀ ನಡೂರು ಸೀತರಾಮ ಶೆಟ್ಟರು ಮಾತನಾಡುತ್ತಾ, “...ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ ಮಾತ್ರಕ್ಕೆ ಎಲ್ಲವೂ ದೊರೆಯಿತು ಎಂದು ತಿಳಿದರೆ ದೊಡ್ಡ ತಪ್ಪಾದೀತು. ಆರ್ಥಿಕ ಸ್ವಾತಂತ್ರ್ಯ ಮುಖ್ಯವಾದದ್ದು. ನಮಗೆ ಇದು ಇನ್ನೂ ದೊರೆತಿಲ್ಲ. ದೊರೆಯ

[ಕಡೆಯ ಪುಟ ನೋಡಿ]

ಚೀನಾ - ಯಶಸ್ಸು, ವೈಫಲ್ಯಗಳ ವಿಮರ್ಶೆ

ಚೀನೀ ಗಣರಾಜ್ಯ ಸ್ಥಾಪನೆಯ ಮೂವತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷದ ಉಪಾಧ್ಯಕ್ಷ ಮಾರ್ಷಲ್ ಯೆ-ಜಿಯಾನ್‌ಯಿಂಗ್ ಮಾಡಿರುವ ಭಾಷಣ ವಿಶ್ವಾದ್ಯಂತ ರಾಜಕೀಯ ತಜ್ಞರ ಗಮನವನ್ನು ಸೆಳೆದಿದೆ. ಈ ಭಾಷಣದ ಕೆಲವು ಅಂಶಗಳನ್ನು ನಮ್ಮ ದೇಶದ ಪತ್ರಿಕೆಗಳೂ ಉದ್ಧರಿಸಿ ತಮಗೆ ತೋಚಿದ ರೀತಿಯಲ್ಲಿ ಅದಕ್ಕೆ ವ್ಯಾಖ್ಯಾನ ನೀಡಿವೆ. ಇದು ಮಾವೋ ತ್ಸೆಡಾಂಗ್ ಅವರನ್ನು ದೈವತ್ವದಿಂದ ಕೆಳಗಿಳಿಸುವ ಪ್ರಯತ್ನವೆಂದೂ ಚೀನೀ ಕಮ್ಯುನಿಸ್ಟ್ ಪಕ್ಷದ ಪದಾಧಿಕಾರಿ ವರ್ಗದೊಳಗೆ ನಡೆಯುತ್ತಿರುವ ಹೊಸ ಸಮತೋಲನದ ಫಲವೆಂದೂ ಈ ಪತ್ರಿಕೆಗಳಲ್ಲಿ ಹೇಳಲಾಗಿದೆ.

ಆದರೆ ಈ ಭಾಷಣವು ಕಳೆದ 30 ವರ್ಷಗಳ ಚೀನಾ ಕ್ರಾಂತಿಯ ಅನುಭವಗಳ ಕುರಿತು ಬಹುಮುಖ್ಯವಾದ ಕೆಲವು ವಿಶ್ಲೇಷಣೆಗಳನ್ನೂ ಪ್ರಾಮಾಣಿಕವಾದ ಸಾಧಾರಣೀಕರಣವನ್ನೂ ಒಳಗೊಂಡಿರುವುದು ಅದನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿದಲ್ಲಿ ಗೊತ್ತಾಗುತ್ತದೆ.

ಮಾರ್ಷಲ್ ಯೆ-ಜಿಯಾನ್‌ಯಿಂಗ್ ಅವರು, ಸ್ವತಃ 'ಪ್ರಾರಂಭಿಕ ಹಂತದ ಮೂಲಭೂತ ಮೌಲ್ಯಮಾಪನ' ವೆಂದು ಕರೆದುಕೊಂಡಿರುವ ತಮ್ಮ ಭಾಷಣದಲ್ಲಿ ಸಾಂಸ್ಕೃತಿಕಕ್ರಾಂತಿಯ ಕೆಲವು ತಪ್ಪುಗಳ ಕುರಿತೂ, ಆಕಾಲದ ತೀವ್ರ ವಾಮಪಂಥೀಯ ನಿಲುಮೆಯು ದ್ವಂದ್ವಮಾನ ಮತ್ತು ಐತಿಹಾಸಿಕ ಭೌತವಾದವನ್ನು ಹೇಗೆ ವಿಕೃತಿಗೊಳಿಸಿತು ಎಂಬುದರ ಬಗ್ಗೆಯೂ ಕೆಲವು ಸ್ವಾಗತಾರ್ಹ ಆತ್ಮ ವಿಮರ್ಶೆಯನ್ನು ಮಾಡಿಕೊಂಡಿದ್ದಾರೆ. ಈ ಹಿಂದೆ ತಪ್ಪಾಗಿ ನಿರ್ವಚಿಸಲ್ಪಟ್ಟಿದ್ದ ಮಾವೋ ತ್ಸೆಡಾಂಗ್ ಅವರ ವಿಚಾರ ಧಾರೆಯನ್ನು ಸರಿಯಾಗಿ ನಿರ್ವಚಿಸುವ ಪ್ರಯತ್ನವನ್ನು ಇಲ್ಲಿ ಕಾಣಬಹುದು.

ಮೂಲಭೂತ ತಿಳುವಳಿಕೆ :

ಅಕ್ಟೋಬರ್, 1949ರ ಚೀನೀ ಕ್ರಾಂತಿಯ ನಂತರದ ಮೂವತ್ತು ವರ್ಷಗಳಲ್ಲಿ ಚೀನೀ ಜನತೆಯು ಸಾಧಿಸಿದ ವಿಜಯಗಳು ಮತ್ತು ಎದುರಿಸಿದ ಅಪಯಶಸ್ಸನ್ನು ಕ್ರಾಂತಿಯ ಮುಂದಿನ ಯಶಸ್ಸಿಗಾಗಿ ವಿಶ್ಲೇಷಿಸುವುದು ಅತೀ ಅಗತ್ಯವೆಂದಿರುವ ಯೆ-ಜಿಯಾನ್‌ಯಿಂಗ್ ಈ ಉದ್ದೇಶಕ್ಕಾಗಿ, ಅದರಲ್ಲೂ ಕಳೆದ ಹತ್ತು ವರ್ಷಗಳ ಸಾಂಸ್ಕೃತಿಕ ಕ್ರಾಂತಿಯ ಇತಿಹಾಸವನ್ನು ಇದಕ್ಕಾಗಿಯೇ ಕರೆಯಲ್ಪಟ್ಟ ಪ್ರತ್ಯೇಕ ಸಮಾವೇಶವೊಂದರಲ್ಲಿ ಸಂಪೂರ್ಣ ವಿಮರ್ಶೆಗೆ ಒಳಪಡಿಸಬೇಕೆಂದೂ, ಕನಿಷ್ಟ ಪಕ್ಷ ಕ್ರಾಂತಿಯ ಮೂವತ್ತನೇ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಈ ಬಗ್ಗೆ ಪ್ರಾರಂಭಿಕ ಹಂತದ ಚರ್ಚೆಯನ್ನಾದರೂ ನಡೆಸಬೇಕಾದುದು ಅಗತ್ಯವೆಂದೂ ಹೇಳಿದ್ದಾರೆ.

ಗಂಭೀರ ಸ್ವರೂಪದ ಪ್ರಮಾದಗಳು

ಮೂವತ್ತು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಮತ್ತು ಯಶಸ್ಸನ್ನು ವಿವರಿಸಿರುವ ಯೆ-ಜಿಯಾನ್‌ಯಿಂಗ್ ಇದೇ ಕಾಲದಲ್ಲಿ ಘಟಿಸಿದ ಕೆಲವು ಗಂಭೀರ ಸ್ವರೂಪದ ತಪ್ಪುಗಳನ್ನೂ ಉಲ್ಲೇಖಿಸಿ ಅವನ್ನು ಟೀಕಿಸಿದ್ದಾರೆ.

"ಈ ಅಮೋಘ ಯಶಸ್ಸಿನ ನಡುವೆ ನಾವು ವಿವೇಚನಾಶೂನ್ಯರಾಗಿದ್ದೆವು. 1957ರಲ್ಲಿ ಕೈ ಬೆರಳೆಣಿಕೆಯಷ್ಟರ ಬಲಪಂಥೀಯ ಬೂರ್ಜ್ವಾಗಳ ವಿರುದ್ಧ ನಾವು ಸೆಣಸಾಡುವುದು ಅಗತ್ಯವಾಗಿತ್ತಾದರೂ ಈ ಹೋರಾಟದ ವ್ಯಾಪ್ತಿಯನ್ನು ವಿಸ್ತರಿಸುವ ಮೂಲಕ ತಪ್ಪು ಮಾಡಿದೆವು. ಎಲ್ಲ ಹೊಸ ಆವಿಷ್ಕಾರಗಳನ್ನು ಜನಪ್ರಿಯಗೊಳಿಸುವ ಮೊದಲು ಅವುಗಳನ್ನು ಅಭ್ಯಸಿಸಿ, ಕಠಿಣ ಪರೀಕ್ಷೆಗೊಳಪಡಿಸುವ ತತ್ವವನ್ನೂ ನಾವು 1958 ರಲ್ಲಿ ಮರೆತೆವು. ಪರಿಣಾಮವಾಗಿ ನಮ್ಮ ಆರ್ಥಿಕ ಕಾರ್ಯಕ್ರಮದ ವಾಸ್ತವಿಕ ನಿಯಮಗಳನ್ನೇ ನಾವು ಉಲ್ಲಂಘಿಸಿದಂತಾಯಿತು. ನಮ್ಮ ಬಗ್ಗೆ ನಾವೇ ಹೆಗ್ಗಳಿಕೆ ಪಟ್ಟುಕೊಂಡು 'ಕಮ್ಯುನಿಸ್ಟ್ ಗಾಳಿ' ಯೊಂದನ್ನು ಉಬ್ಬಿಸಿಬಿಡುವ ಹುಮ್ಮಸ್ಸಿನಲ್ಲಿ ಒಂದೇ ಸಮನೆ ಇಚ್ಛಾನುಸಾರ ನಿರ್ದೇಶನಗಳನ್ನು ನೀಡಲಾರಂಭಿಸಿದೆವು. 1959ರಲ್ಲಿ ಪಕ್ಷದ ಆಂತರಿಕ ಸಂಘರ್ಷದ ವೇಳೆ 'ಬಲ ಸಂದರ್ಭಸಾಧಕತನ' ವೆನ್ನಲಾದುದರ ವಿರುದ್ಧ ಸಮಂಜಸವಲ್ಲದ ಹೋರಾಟ ನಡೆಸಿದೆವು. ಈ ಎಡಪಂಥೀಯ ತಪ್ಪುಗಳು, ಅದರೊಂದಿಗೆ ಮೂರು ವರ್ಷಗಳ ಕಾಲ ಸಂಭವಿಸಿದ ಪ್ರಾಕೃತಿಕ ವಿಕೋಪ, ಮತ್ತು ಸೋವಿಯತ್ ಒಕ್ಕೂಟದೊಂದಿಗಿನ ಒಪ್ಪಂದಗಳ ರದ್ದತಿ ಹಾಗೂ ಸೋವಿಯತ್ ಸರಕಾರ ತನ್ನ ತಾಂತ್ರಿಕ ಪರಿಣತರನ್ನು ಹಿಂದಕ್ಕೆ ಕರೆಸಿಕೊಂಡುದು, ಇವುಗಳೆಲ್ಲವುಗಳ ಪರಿಣಾಮವಾಗಿ 1950ರ ದಶಕದ ಕೊನೆ ಹಾಗೂ 1960ರ ದಶಕದ ಆದಿಯಲ್ಲಿ ನಮ್ಮ ಆರ್ಥಿಕ ಕ್ಷೇತ್ರ ತೀವ್ರ ಸೋಲನ್ನನುಭವಿಸಿತು" ಎಂದೂ ಅವರು ಹೇಳಿದ್ದಾರೆ.

ಇವೆಲ್ಲ 'ಮಹಾನ್ ಮುನ್ನೆಗೆತ'ದ (great leap) ಅವಧಿಗೆ ಸೇರಿದ ಘಟನೆಗಳು. ಆದರೂ ಇವುಗಳಲ್ಲಿ ಮಾವೋ ತ್ಸೆ ಡಾಂಗ್ ವಹಿಸಿದ್ದ ಪಾತ್ರವೇನು ಎಂಬುದನ್ನೂ ವಿಮರ್ಶಿಸಬೇಕಾಗುತ್ತದೆ. ಏಕೆಂದರೆ ಈ ಕಾಲದಲ್ಲಿ ಸಂಭವಿಸಿದ ವಾಮಪಂಥೀಯ ತಪ್ಪುಗಳಿಗೂ ಮತ್ತು ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ಲಿನ್‌ಬಿಯಾವೋ ಹಾಗೂ ದುಷ್ಟ ಚತುಷ್ಟಯರು" ಅನುಸರಿಸಿದರೆನ್ನಲಾದ ತೀವ್ರಗಾಮಿ ಎಡಪಂಥೀಯ ಧೋರಣೆಗಳಿಗೂ ಪರಸ್ಪರ ಸಂಬಂಧವಿದೆ. ಅಷ್ಟೇ ಅಲ್ಲದೆ ಈ ಪ್ರಮಾದಗಳಿಗೆ ಕಾರಣೀಭೂತವಾದ ವರ್ಗ ಬುನಾದಿ ಮತ್ತು ಆಕಾಲದಲ್ಲಿ ಚೀನಾದಲ್ಲಿದ್ದ ಸಾಮಾಜಿಕ ಆರ್ಥಿಕ ವ್ಯವಸ್ಥೆಗಳನ್ನೂ ವಿಮರ್ಶೆಗೆ ಒಳಪಡಿಸಬೇಕಾಗುತ್ತದೆ. ಚೀನೀ ಕ್ರಾಂತಿಯಲ್ಲಿ ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷದಲ್ಲಿ ಮಾವೋ ವಹಿಸಿದ್ದ ಅಮೋಘ ಪಾತ್ರದಿಂದಾಗಿ ಅವರಿಗಿರುವ ಅಪಾರ ಗೌರವವೂ ಅವರ ತಪ್ಪುಗಳೂ ತೋರಿಬಂದಾಗ ಅದನ್ನು ಟೀಕೆಗೆ ಅಥವಾ ವಿಮರ್ಶೆಗೆ ಒಳಪಡಿಸುವಲ್ಲಿ ಅಡ್ಡಿಯಾಗಕೂಡದು.

ಸಾಂಸ್ಕೃತಿಕ ಕ್ರಾಂತಿ :

"ಚೀನೀ ಗಣರಾಜ್ಯ ಸ್ಥಾಪನೆಯಾದ ಮೊದಲ ಹದಿನೇಳು ವರ್ಷಗಳಲ್ಲಿ ಅನೇಕ ತಪ್ಪುಗಳಾಗಿದ್ದರೂ ಸಾಧಾರಣವಾಗಿ ಟೀಕೆ ಮತ್ತು ಸ್ವಯಂ ವಿಮರ್ಶೆಯ ಆಧಾರದ ಮೇಲೆ ಮತ್ತು ಪ್ರಜಾಸತ್ತಾತ್ಮಕ ಕೇಂದ್ರೀಕರಣದ ತತ್ವಗಳ ಮೇಲೆ ಅವುಗಳನ್ನು ಸರಿಪಡಿಸಿಕೊಳ್ಳಲಾಗುತ್ತಿತ್ತು. ಆದರೆ ಆ ಬಳಿಕ ಈ ತಪ್ಪುಗಳ ಮೂಲಕ ನಾವು ಕಂಡುಕೊಂಡ ಅನುಭವಕ್ಕೆ ಬಲವಾಗಿ ಅಂಟಿಕೊಳ್ಳುವುದು ನಮ್ಮಿಂದ ಸಾಧ್ಯವಾಗಲಿಲ್ಲ. ಇದಕ್ಕಾಗಿ ಚೀನೀ ಜನತೆ ಮುಂದೆ ಬಹು ದೊಡ್ಡ ಬೆಲೆ ತೆರಬೇಕಾಯಿತು; ತಪ್ಪುಗಳನ್ನು ನಿವಾರಿಸಿಕೊಳ್ಳುವ ಬದಲು ಇನ್ನಷ್ಟು ಗಂಭೀರ ತಪ್ಪುಗಳು ಮಾಡಲ್ಪಟ್ಟವು" ಎಂದು ಮಾರ್ಷಲ್ ಯೆ ಸಾಂಸ್ಕೃತಿಕ ಕ್ರಾಂತಿಯ ಬಗ್ಗೆ ಹೇಳಿದ್ದಾರೆ.

"1966 ರಲ್ಲಿ ಆರಂಭಗೊಂಡ ಸಾಂಸ್ಕೃತಿಕ ಕ್ರಾಂತಿಯ ಹತ್ತು ವರ್ಷಗಳ ಕಾಲ ನಮ್ಮ ದೇಶದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿಯ ನಡುವೆ ಭೀಕರ ಹೋರಾಟ ನಡೆಯಿತು. ಸಾಂಸ್ಕೃತಿಕ ಕ್ರಾಂತಿಯನ್ನು ಆರಂಭಿಸಿದ ಉದ್ದೇಶ ಪರಿಷ್ಕರಣವಾದವನ್ನು ವಿರೋಧಿಸುವುದು ಹಾಗೂ ಅದನ್ನು ತಡೆಹಿಡಿಯುವುದಾಗಿತ್ತು. ಅಧಿಕಾರದಲ್ಲಿರುವ ಶ್ರಮಿಕವರ್ಗದ ಪಕ್ಷವು ಪರಿಷ್ಕರಣವಾದದೆಡೆಗೆ ವಾಲುವ ಪ್ರವೃತ್ತಿಯ ವಿರುದ್ಧ ಸದಾಕಾಲ ಎಚ್ಚರಿಕೆಯಿಂದಿರಬೇಕಾದುದು ಅಗತ್ಯ. ಆದರೆ ಸಾಂಸ್ಕೃತಿಕ ಕ್ರಾಂತಿಯನ್ನು ಪ್ರಾರಂಭಿಸಿದ ಕಾಲದಲ್ಲಿ ದೇಶದಲ್ಲಿ ಮತ್ತು ಪಕ್ಷದೊಳಗೆ ಎಂತಹ ಪರಿಸ್ಥಿತಿ ಇತ್ತೆಂಬ ಬಗ್ಗೆ ಮಾಡಲಾಗಿದ್ದ ಅಂದಾಜು, ವಸ್ತುಸ್ಥಿತಿಗೆ ಸಂಪೂರ್ಣ ವಿರುದ್ಧವಾಗಿತ್ತು. 'ಪರಿಷ್ಕರಣವಾದ'ದ ಬಗ್ಗೆ ಸ್ಪಷ್ಟವಾದ ನಿರ್ವಚನೆಯನ್ನೂ ನೀಡಲಾಗಿರಲಿಲ್ಲ. ಪ್ರಜಾಸತ್ತಾತ್ಮಕ ಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿದ್ದ ಹೋರಾಟದ ಮಾರ್ಗವನ್ನೂ ತಪ್ಪುತಪ್ಪಾದ ಧೋರಣೆಯನ್ನೂ ಅಂಗೀಕರಿಸಲಾಗಿತ್ತು. ಲಿನ್ ಬಿಯಾವೋ, ದುಷ್ಟ ಚತುಷ್ಟಯರು ಮತ್ತಿತರ ಸಂದರ್ಭಸಾಧಕರು ಪ್ರತಿಕ್ರಾಂತಿ ನಡೆಸುವ ದುರುದ್ದೇಶದಿಂದ ಪ್ರೇರಿತರಾಗಿ, ಈ ತಪ್ಪುಗಳ ದುರ್ಲಾಭ ಪಡೆದು ಪ್ರತಿಯೊಂದನ್ನೂ ಅತಿರೇಕಕ್ಕೆ ಕೊಂಡೊಯ್ದುದಲ್ಲದೆ ತೀವ್ರ ಎಡಪಂಥೀಯ ಧೋರಣೆಯೊಂದನ್ನು ಸಿದ್ಧಪಡಿಸಿ ಅದನ್ನು ಅನುಷ್ಠಾನಕ್ಕೆ ತಂದರು. ಅವರು ಸಾರಾಸಗಟಾಗಿ ಎಲ್ಲವನ್ನೂ ಕಿತ್ತೊಗೆದು, ಅಂತರ್ಯುದ್ಧವೊಂದನ್ನು ನಡೆಸಿ, ಪಕ್ಷದ ಮುಂದಾಳುತ್ವವನ್ನು ತಮ್ಮ ಕೈವಶ ಮಾಡಿಕೊಂಡು ಅಧಿಕಾರವನ್ನು ಹಸ್ತಗತ ಮಾಡಿಕೊಳ್ಳಲು ಕ್ಷಿಪ್ರ ಕ್ರಾಂತಿಯ ಸನ್ನಾಹವನ್ನೂ ನಡೆಸಿದರು. ನಮ್ಮ ಸಮಾಜವಾದಿ ವ್ಯವಸ್ಥೆಯ ತಳಹದಿಯನ್ನೇ ಅವಗಣಿಸಿ, ಕಾರ್ಮಿಕವರ್ಗದ ಸರ್ವಾಧಿಕಾರವನ್ನು ಬುಡಮೇಲು ಮಾಡಿ ಪಕ್ಷವನ್ನು ಮುಂದಾಳುತ್ವದಿಂದ ತೊಲಗಿಸಲೂ, ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ಕಲಬೆರಕೆಯುಂಟುಮಾಡಲೂ, ನಮ್ಮ ದೇಶವನ್ನು ಮತ್ತೊಮ್ಮೆ ಗೊಂದಲ, ರಕ್ತಪಾತ ಮತ್ತು ನಮ್ಮ ಜನ ಎಂದೆಂದೂ ಬಯಸದ ಹಿಂಸೆಯ ವಾತಾವರಣಕ್ಕೆ ತಳ್ಳುವ ಪ್ರಯತ್ನವೂ ನಡೆಯಿತು. ಪ್ರತಿಕ್ರಾಂತಿವಾದಿಗಳ ಈ ದುಷ್ಟಕೂಟವು ಹತ್ತು ವರ್ಷಗಳ ಕಾಲ ನಡೆಸಿದ ಈ ಅನಾಹುತ ನಮ್ಮ ಜನತೆಯ ಪಾಲಿಗೆ ಅತಿ ದೊಡ್ಡ ಗಂಡಾಂತರವನ್ನು ತಂದೊಡ್ಡಿತು. ಇದು ಗಣರಾಜ್ಯ ಸ್ಥಾಪನೆಯಾದ ಬಳಿಕ ನಮ್ಮ ಸಮಾಜವಾದಿ ಚಳುವಳಿ ಅನುಭವಿಸಿದ ಅತ್ಯಂತ ದೊಡ್ಡ ಹಿನ್ನಡೆ. ನಮ್ಮ ಪಕ್ಷ ಮಾಡಿದ್ದ ತಪ್ಪುಗಳಿಗಿಂತ ಈ ದುಷ್ಟಕೂಟವು ನಡೆಸಿದ್ದ ಪಿತೂರಿಯ ಚಟುವಟಿಕೆಗಳು ಸ್ವರೂಪದಲ್ಲಿ ತೀರಾ ಭಿನ್ನವಾಗಿವೆ. ಈ ಜನ ನಮ್ಮ ಜನತೆಯ ಅತ್ಯಂತ ಹೀನ ಶತ್ರುಗಳಾಗಿದ್ದಾರೆ. ಹಾಗಾಗಿ ಅವರ ಪ್ರಶ್ನೆಯನ್ನು ಆಂತರಿಕ ಸಂಘರ್ಷದ ಮೂಲಕ ಬಗೆಹರಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ದುಷ್ಟ ಚತುಷ್ಟಯರನ್ನು ಪಕ್ಷದಿಂದ ಉಚ್ಚಾಟಿಸುವ ಮೂಲಕ ನಾವು ನಮ್ಮ ಪಕ್ಷವನ್ನೂ ಪ್ರಭುತ್ವವನ್ನೂ ದೊಡ್ಡದೊಂದು ಕುತ್ತಿನಿಂದ ಪಾರು ಮಾಡಿದ್ದೇವೆ.

ತೀವ್ರ ಎಡಪಂಥವಾದಿ ನಿಲುಮೆ :

ಲಿನ್ ಬಿಯಾವೋ ಮತ್ತು ದುಷ್ಟ ಚತುಷ್ಟಯರು ಅನುಸರಿಸಿದ ತೀವ್ರ ಎಡಪಂಥವಾದಿ ನಿಲುಮೆಯ ಕುರಿತು ಯೆ ಜಿಯಾನ್‌ಯಿಂಗ್ ಹೀಗೆಂದಿದ್ದಾರೆ : "ಸೈದ್ಧಾಂತಿಕ ಕ್ಷೇತ್ರದಲ್ಲಿ ಅವರು ವಾಸ್ತವಿಕತೆ ಮತ್ತು ಕಾಲ್ಪನಿಕತೆಗಳ ಹಾಗೂ ವಸ್ತು ಮತ್ತು ಮನಸ್ಸಿನ ನಡುವಣ ಸಂಬಂಧವನ್ನು ತಲೆಕೆಳಗು ಮಾಡಿದರು. ಮನುಷ್ಯ ತನ್ನ ಇಚ್ಛಾನುಸಾರ ಊರ್ಧ್ವರಚನೆಯನ್ನು (Super Structure) ಉತ್ಪಾದನಾ ಸಂಬಂಧಗಳನ್ನು 'ಬದಲಾಯಿಸ'ಬಹುದು ಅಥವಾ ಪರಿವರ್ತಿಸಬಹುದು ಎಂಬ ನಂಬಿಕೆಗೆ ಅಂಟಿಕೊಂಡ ಅವರು ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಅಸ್ತಿತ್ವದ ಮೇಲೆ, ಊರ್ಧ್ವ ರಚನೆ ಆರ್ಥಿಕ ತಳಹದಿಯ ಮೇಲೆ, ಉತ್ಪಾದನಾ ಸಂಬಂಧಗಳು ಉತ್ಪಾದಕ ಶಕ್ತಿಗಳ ಮೇಲೆ ಬೀರುವ ಪ್ರಭಾವವನ್ನು ಅತಿಶಯೋಕ್ತಿ ಮಾಡಿದರು. ಪ್ರತಿಭಾವಂತರು ಎಲ್ಲವನ್ನು ತೀರ್ಮಾನಿಸುತ್ತಾರೆ, ಕ್ರಾಂತಿಕಾರಿ ಮುಖಂಡರು ಸರ್ವಶಕ್ತ ದೇವತೆಗಳು, ಸಕಲವನ್ನೂ ತಿಳಿದವರು, ಅವರ ಪ್ರತಿಯೊಂದು ಶಬ್ದವೂ ಸತ್ಯ ಮತ್ತು ಅನುಲ್ಲಂಘನೀಯವೆಂದೂ ಈ ಜನ ಸಾರಲಾರಂಭಿಸಿದರು."

"ಶೋಷಣೆಯ ವ್ಯವಸ್ಥೆಯನ್ನು ನಿರ್ಮೂಲ ಮಾಡಿದ ಮೇಲೂ ಸಮಾಜವಾದಿ ಸಮಾಜವು ಕೊನೆವರೆಗೆ ತಾವೇ ಹೇಳುವಂತಹ ಮಾದರಿಯ ವರ್ಗ ಹೋರಾಟದಲ್ಲಿ ನಿರತವಾಗಿರುವುದೆಂದೂ, ಇದು ಸದಾಕಾಲ ಹೀಗೇ ನಡೆಯುವುದೆಂದೂ ಸಮಾಜವಾದಿ ಸಮಾಜದ ಪ್ರಗತಿಗೆ ಈ ವರ್ಗ ಹೋರಾಟ ಮಾತ್ರವೇ ಪ್ರೇರಕ ಶಕ್ತಿಯಾಗಿರುವುದೆಂದೂ ಅವರು ಪ್ರತಿಪಾದಿಸಿದರು". "ಮಾನವನ ಇತಿಹಾಸದ ವಿಕಸನದಲ್ಲಿ ಜನರ ಮೂಲಭೂತ ಚಟುವಟಿಕೆಯಾಗಿರುವ ಉತ್ಪಾದನೆಯ ನಿರ್ಣಾಯಕ ಪಾತ್ರವನ್ನು ಅವರು ಅಲ್ಲಗಳೆದರು. ಚಾರಿತ್ರಿಕ ಭೌತವಾದದ ಮೂಲತತ್ವವಾಗಿರುವ "ಉತ್ಪಾದಕ ಶಕ್ತಿಗಳ ವಿಶಿಷ್ಟ ಪ್ರಾಮುಖ್ಯತೆಯ ಸೂತ್ರವನ್ನು ಅವರು ಒಪ್ಪುತ್ತಿರಲಿಲ್ಲ."

ಮಾರ್ಕ್ಸ್‌ವಾದದ ವಿಕೃತಿ :

"ನಮ್ಮ ಪಕ್ಷದೊಳಗೆ ಬೂರ್ಜ್ವಾ ವರ್ಗವೊಂದು ರಚನೆಯಾಗಿದೆ ಎಂಬ ಕುಂಟುನೆಪದಲ್ಲಿ ಈ ದುಷ್ಟಕೂಟವು 'ವರ್ಗಸಂಬಂಧದಲ್ಲಿ ಹೊಸ ಬದಲಾವಣೆ' ಎಂಬ ಸೂತ್ರವೊಂದನ್ನು ಸೃಷ್ಟಿಸಿಕೊಂಡಿತು. ಇದರಂತೆ ನಮ್ಮ ಹಿರಿಯ ಅನುಭವೀ ಸಂಗಾತಿಗಳನ್ನು ಪ್ರಜಾಪ್ರಭುತ್ವವಾದಿಗಳೊಂದಿಗೂ, ಪ್ರಜಾಪ್ರಭುತ್ವವಾದಿಗಳನ್ನು ಬಂಡವಾಳಶಾಹಿ ಮಾರ್ಗಾನುಯಾಯಿಗಳೊಂದಿಗೂ ಹೋಲಿಸುವ ಪ್ರತಿಕ್ರಾಂತಿಯ ಸಿದ್ಧಾಂತವೊಂದನ್ನು ಅವರು ರಚಿಸಿದರು. ಈ ಮೂಲಕ ಪಕ್ಷ, ಸರಕಾರ ಮತ್ತು ಸೇನೆಯ ಎಲ್ಲಾ ಹಂತಗಳಲ್ಲಿರುವ ನಮ್ಮ ಪ್ರಮುಖ ಸದಸ್ಯರು 'ನಿರಂತರ ಕ್ರಾಂತಿಗೆ' ಬಲಿಪಶುಗಳಾಗಬೇಕಾಯಿತು. ಶ್ರಮಿಕ ವರ್ಗದ ಸರ್ವಾಧಿಕಾರದ ಅಸ್ತ್ರವಾಗಿರುವ ನಮ್ಮ ಪ್ರಭುತ್ವ ವ್ಯವಸ್ಥೆಯನ್ನು ತೀವ್ರ ಆಘಾತಗಳಿಗೆ ಗುರಿಪಡಿಸಲಾಯಿತು. 'ಸಾರ್ವತ್ರಿಕಸರ್ವಾಧಿಕಾರ'ವೆಂಬ ಪ್ರತಿಗಾಮಿ ಸಿದ್ಧಾಂತವನ್ನು ಪ್ರತಿಪಾದಿಸಿದ ಈ ಜನ ಪ್ರಭುತ್ವ ಮತ್ತು ಪಕ್ಷದೊಳಗಣ ಪ್ರಜಾಸತ್ತೆಯನ್ನು ಅದರ ಅಸ್ತಿಭಾರವನ್ನು ಕಡೆಗಣಿಸಿ ತಮ್ಮ ಪ್ರತಿಕ್ರಾಂತಿವಾದಿ ಫ್ಯಾಸಿಸ್ಟ್ ಸರ್ವಾಧಿಕಾರವೊಂದನ್ನು ಜನತೆಯ ಮೇಲೆ ಹೇರಲು ಶಕ್ತಿಮೀರಿ ಪ್ರಯತ್ನಿಸಿದರು. ನಿಷ್ಠೆಯಿಂದ ದುಡಿಯುತ್ತಿದ್ದ ಕಾರ್ಮಿಕರನ್ನೂ ರೈತರನ್ನೂ ಬಂಡವಾಳಶಾಹಿ ಮಾರ್ಗಾವಲಂಬಿಗಳ ಹಸ್ತಕರು ಎಂದು ದೂಷಿಸಿ ಸಮೃದ್ಧಿಯ ಬಗ್ಗೆ ಸಂಪೂರ್ಣ ತಪ್ಪು ಚಿತ್ರಣ ನೀಡಿದರು.

"ಮಾರ್ಕ್ಸ್ ಉಲ್ಲೇಖಿಸಿರುವ 'ಬೂರ್ಜ್ವಾ ಹಕ್ಕು' ಎಂಬ ಪದದ ಅರ್ಥವನ್ನು ವಿಕೃತಗೊಳಿಸಿದರಲ್ಲದೆ 'ಪ್ರತಿಯೊಬ್ಬನೂ ತನ್ನ ದುಡಿಮೆಗೆ ಅನುಸಾರವಾಗಿ ತನ್ನ ಅವಶ್ಯಕತೆಗೆ ತಕ್ಕಂತೆ'

ಎಂಬ ಸೂತ್ರವು ಬಂಡವಾಳಶಾಹಿ ಪದ್ಧತಿಯ ಆರ್ಥಿಕ ಮೂಲ ಎಂದೂ ಹೇಳಲಾರಂಭಿಸಿದರು. ಈ ಸೂತ್ರದ ಸ್ಥಾನದಲ್ಲಿ "ಸರ್ವಸಮಾನತೆಯ" ಪ್ರತಿಗಾಮಿ ತತ್ವವನ್ನು ಅನುಷ್ಠಾನಕ್ಕೆ ತರ ಬಯಸಿದರು. ಮಹಾಕ್ರಾಂತಿಕಾರಿಗಳ ಮುಖವಾಡ ತೊಟ್ಟು, ನಮ್ಮ ಕ್ರಾಂತಿಕಾರಿ ಮುಂದಾಳುವಿನ ಪ್ರತಿಷ್ಠೆಯನ್ನು ದುರುಪಯೋಗಪಡಿಸಿ, ಧಾರ್ಮಿಕನಂಬಿಕೆಯಂತಹ ಅಂಧ ವಿಶ್ವಾಸವನ್ನು ಹೆಚ್ಚಿಸಲೂ ಪ್ರಯತ್ನಿಸಿದರು. ತಾವು ಎಲ್ಲರಿಗಿಂತ ಹೆಚ್ಚು ಕ್ರಾಂತಿಕಾರಿಗಳೆಂದೂ, ಮಾವೋರ ಅತ್ಯಂತ ನಿಕಟವರ್ತಿ ಅನುಯಾಯಿಗಳೆಂದೂ, ಅವರಿಗೆ ಸದಾಕಾಲ ವಿಧೇಯರಾಗಿದ್ದು ಅವರು ನಿರೂಪಿಸಿದುದೆಂದು ಹೇಳಲಾದ ತತ್ವಗಳ ಪ್ರಕಾರವೇ ಸದಾಕಾಲ ನಡೆದುಕೊಳ್ಳುವವರೆಂದೂ, ಈ ದುಷ್ಟಕೂಟದ ಮಂದಿ ತಮ್ಮನ್ನು ತಾವು ವರ್ಣಿಸಿಕೊಳ್ಳುತ್ತಿದ್ದರು."

"ಲಿನ್ ಬಿಯಾವೋ ಗುಂಪು ಮತ್ತು ದುಷ್ಟಚತುಷ್ಟಯರ ಕೂಟವು ಅಪಾರ ಠಕ್ಕುತನದೊಂದಿಗೆ ಪಾಶವೀ ಪ್ರವೃತ್ತಿಯನ್ನು ಭಯೋತ್ಪಾದಕ ನಡುವಳಿಕೆಯನ್ನೂ ಬೆಸೆದುಕೊಂಡಿತ್ತು. ಹೀಗಾಗಿ ಕೇಂದ್ರದಿಂದ ತೀರಾ ಕೆಳಗಿನ ಹಂತದ ವರೆಗಿನ ಪಕ್ಷದ ಹೆಚ್ಚಿನ ಎಲ್ಲಾ ಪ್ರಮುಖ ಸದಸ್ಯರೂ, ವಿವಿಧ ಕ್ಷೇತ್ರಗಳ ವಿಖ್ಯಾತ ಮಾದರಿ ಕೆಲಸಗಾರರು, ರೈತರು, ಕ್ರಾಂತಿಕಾರಿ ಸೈನಿಕರು ಮುತಾದವರ ಮೇಲೆಲ್ಲಾ ಹುಸಿ ಆರೋಪಗಳನ್ನು ಹೇರಲಾಯಿತು. ಅವರ ಮೇಲೆ ವಿವಿಧ ಪ್ರಮಾಣದ ದಬ್ಬಾಳಿಕೆ ನಡೆಯಿತು. ಅವರೊಂದಿಗೆ ಸಂಪರ್ಕ ಹೊಂದಿದ್ದ ಅಪರಾಧಕ್ಕಾಗಿ ಅವರ ಕುಟುಂಬಗಳು ಸಾಕಷ್ಟು ಯಾತನೆ ಅನುಭವಿಸಬೇಕಾಯಿತು. ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಉಪಾಧ್ಯಾಯರು, ವಿಜ್ಞಾನಿಗಳು, ಇಂಜಿನಿಯರುಗಳು, ತಂತ್ರಜ್ಞರು, ವೈದ್ಯರು, ಸಮಾಜ ವಿಜ್ಞಾನಿಗಳು, ಬರಹಗಾರರು, ಕಲಾವಿದರು, ಪತ್ರಕರ್ತರು ಮತ್ತಿತರರನ್ನೊಳಗೊಂಡು ಅಪಾರ ಸಂಖ್ಯೆಯ ಬುದ್ಧಿಜೀವಿಗಳೂ ಇಂತಹ ಯಾತನೆ ಅನುಭವಿಸಬೇಕಾಯಿತು."

"ಇದು ನಮ್ಮ ಸಮಸ್ತ ಜನತೆ ಅನುಭವಿಸಿದ ಘೋರ ದುರಂತ"ವೆಂದಿರುವ ಮಾರ್ಷಲ್ ಯೆ-ಜಿಯಾನ್‌ಯಿಂಗ್ ಚೀನೀ ಜನತೆಯ ವಿಜಯವನ್ನು ಇನ್ನಷ್ಟು ವಿಶಾಲಗೊಳಿಸಿ ಭದ್ರವಾಗಿರಿಸಲು ಲಿನ್‌ಬಿಯಾವೋ ಮತ್ತು ದುಷ್ಟಚತುಷ್ಟಯರು ಅನುಸರಿಸಿದ್ದ ತೀವ್ರ ಎಡಪಂಥವಾದಿ ಧೋರಣೆಯನ್ನು ಇನ್ನಷ್ಟು ಟೀಕಿಸಬೇಕಾದುದು ಅಗತ್ಯವೆಂದಿದ್ದಾರೆ. ಈ ಧೋರಣೆ ಎಂತಹ ಅನಾಹುತಕ್ಕೆ ಕಾರಣವಾಗಿದೆ ಎಂಬುದರ ಕಲ್ಪನೆ ಇನ್ನೂ ಬಹಳ ಜನಕ್ಕೆ ಇದ್ದಂತಿಲ್ಲ; ಹಾಗಾಗಿ ಎಡಪಂಥವಾದದ ವಿರುದ್ಧ ಈವರೆಗೆ ನಡೆಸಿದ ಟೀಕೆ, ವಿಮರ್ಶೆ ಏನೇನೂ ಸಾಲದು ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

ಮಾವೋ ಝೆಡಾಂಗ್ ವಿಚಾರ ಧಾರೆ:

ಮಾರ್ಷಲ್ ಯೆ ಅವರ ಭಾಷಣದ ತುಂಬಾ ಮಾವೋ ಝೆಡಾಂಗ್ ಅವರ ಕೊಡುಗೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಲಾಗಿದ್ದರೂ, ಹತ್ತು ವರ್ಷಗಳ ಕಾಲದ 'ಸಾಂಸ್ಕೃತಿಕ ಕ್ರಾಂತಿ'ಯಲ್ಲಿ ಮಾವೋ ವಹಿಸಿದ್ದ ಪಾತ್ರವೇನು ಎಂಬ ಬಗ್ಗೆ ಅದು ಮೌನವಾಗಿದ್ದರೂ ಮೊತ್ತ ಮೊದಲ ಬಾರಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಮಾವೋ ಝೆಡಾಂಗ್ ವಿಚಾರಧಾರೆಯ ಬಗ್ಗೆ ನಿರ್ದಿಷ್ಟ ನಿರ್ವಚನೆಯೊಂದನ್ನು ನೀಡುವ ಪ್ರಯತ್ನವೊಂದನ್ನು ಅದರಲ್ಲಿ ಮಾಡಲಾಗಿದೆ. ಹತ್ತು ವರ್ಷಗಳ ಹಿಂದೆ ಪ್ರಸಾರವಾಗುತ್ತಿದ್ದ ಮಾವೋ ವಿಚಾರಧಾರೆಯ ನಿರ್ವಚನೆಗಿಂತ ಈಗಿನ ನಿರ್ವಚನೆ ಭಿನ್ನವಾಗಿರುವುದನ್ನು ಗಮನಿಸಬಹುದು.

ಈ ಹಿಂದೆ ಮಾವೋ ವಾದವೆಂದರೆ "ಇಂದಿನ ಯುಗದ ಮಾರ್ಕ್ಸ್‌ವಾದ ಲೆನಿನ್‌ವಾದ"ವೆಂದು ಅದನ್ನು ಸಾರ್ವತ್ರೀಕರಣಗೊಳಿಸಲಾಗುತ್ತಿತ್ತು. ಆದರೆ, ಇದೀಗ ಮಾವೋ ವಾದವೆಂದರೆ ಚೀನೀಕ್ರಾಂತಿಯಲ್ಲಿ ಅನ್ವಯಿಸಲ್ಪಟ್ಟು ವಿಕಾಸಗೊಳಿಸಲ್ಪಟ್ಟ ಮಾರ್ಕ್ಸ್‌ವಾದ-ಲೆನಿನ್‌ವಾದ ಎಂಬುದಾಗಿ ಅದನ್ನು ವರ್ಣಿಸಲಾಗಿದೆ. "ಮಾವೋ ಮತ್ತು ಅವರ ಸಂಗಾತಿಗಳು ಜನತಾ ಸೈನ್ಯವನ್ನು ಕಟ್ಟಿ, ಕ್ರಾಂತಿಕಾರಿ ನೆಲೆಗಳನ್ನು ಸ್ಥಾಪಿಸಿ, ದೀರ್ಘಕಾಲದ ಸಮರವನ್ನು ನಿರ್ದೇಶಿಸಿದರು. ಮಾವೋ ನೇತೃತ್ವದಲ್ಲಿನ ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ನಾವು ಅನೇಕ ಸಂಕಷ್ಟಗಳನ್ನೂ, ಎಡರುತೊಡರುಗಳನ್ನೂ ಎದುರಿಸಿ ಯಶಸ್ವಿಯಾದೆವು. ನವೀನ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಜಯಗಳಿಸಿದೆವು ಮತ್ತು ಸಮಾಜವಾದಿ ಕ್ರಾಂತಿ ಹಾಗೂ ನಿರ್ಮಾಣ ಕಾರ್ಯದಲ್ಲಿ ಅಮೋಘ ಯಶಸ್ಸನ್ನು ಸಂಪಾದಿಸಿದೆವು. ಹೀಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಚೀನೀ ಕ್ರಾಂತಿಯಲ್ಲಿ ಬೆಳೆಸಿ, ವಿಕಾಸಪಡಿಸಿದುದನ್ನೇ ನಾವು ಚೀನೀ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾದ ಜನತೆ 'ಮಾವೋ ವಾದ' ವೆನ್ನುತ್ತೇವೆ. 'ಮಾವೋ ವಾದ'ವೆಂದರೆ ಮಾವೋ ಅವರ ವೈಯುಕ್ತಿಕ ಬುದ್ಧಿಮತ್ತೆಯ ಫಲಸ್ವರೂಪ ಮಾತ್ರ ಎಂದೇನೂ ಅಲ್ಲ; ಅದು ಅವರ ಸಂಗಾತಿಗಳ ಪ್ರತಿಭೆಯ ಫಲವೂ ಹೌದು ...ಕಳೆದ ಅರ್ಧ ಶತಮಾನಕಾಲದ ಚೀನೀ ಹೋರಾಟದಲ್ಲಿ ಗಳಿಸಿಕೊಂಡ ಅನುಭವಗಳ ಘನೀಕೃತ ರೂಪ; ...ಚೀನೀ ಕಮ್ಯುನಿಸ್ಟ್ ಪಕ್ಷದ ಸಮಗ್ರ ತಿಳುವಳಿಕೆಯ ಕ್ರೋಢೀಕರಣ" ವೆಂಬುದಾಗಿ ಮಾವೋ ವಾದವನ್ನು ವಿವರಿಸಲಾಗಿದೆ.

ವ್ಯಕ್ತಿಗಳ ಪಾತ್ರ:

ವೈಯುಕ್ತಿಕ ಮುಂದಾಳುಗಳು ವಹಿಸುವ ಪಾತ್ರ ಮತ್ತು ಕಾರ್ಮಿಕವರ್ಗದ ಮುಖಂಡರ ಪ್ರಶ್ನೆಯ ಕುರಿತು ಲೆನಿನ್ ಅವರ ಮಾತುಗಳನ್ನು ಉದ್ಧರಿಸಿ ಯೆ ಜಿಯಾನ್‌ಯಿಂಗ್ ಹೀಗೆಂದಿದ್ದಾರೆ. "ಎಲ್ಲಾ ಸಂಘಟನೆಗಳಿಗೂ-ಅವು ಯಾವುದೇ ಮಟ್ಟದಲ್ಲಿರಲಿ ತಮ್ಮದೇ ಆದ ಮುಂದಾಳುಗಳು ಅಗತ್ಯ. ಈ ಮುಂದಾಳುಗಳು ಸಾಮುದಾಯಿಕ ಹೋರಾಟಗಳ ಜತೆಗೇ ಬೆಳೆಯುತ್ತಾರೆ; ಅದರೊಂದಿಗೆ ಅವರ ಪ್ರತಿಷ್ಟೆಯೂ ಬೆಳೆಯುತ್ತದೆ. ಮುಂದಾಳುಗಳೆಂದರೆ ದೇವತೆಗಳಲ್ಲ. ಅವರು ಎಡವಿ ಬೀಳದವರೂ ಅಲ್ಲ; ಹಾಗಾಗಿ ಅವರನ್ನು ದೈವತ್ವಕ್ಕೇರಿಸಬಾರದು. ಸಮಷ್ಟಿ ಮತ್ತು ಸಮುದಾಯವನ್ನು ಅವಗಣಿಸುವುದು ಅಕ್ಷಮ್ಯವೆನಿಸುತ್ತದೆ; ಹಾಗೆಯೇ ಮುಂದಾಳುಗಳ ಪಾತ್ರವನ್ನು ಅತಿ ರಂಜಿಸುವುದೂ ಅಷ್ಟೇ ತಪ್ಪಾಗುತ್ತದೆ. ಎಲ್ಲದರಲ್ಲೂ ಕೊನೆಯ ಮಾತು ಕೆಲವೇ ವ್ಯಕ್ತಿಗಳದ್ದಾಗಿರಕೂಡದು. ಅಥವಾ ಧೋರಣೆಗಳನ್ನು ರೂಪಿಸುವ ಕೆಲಸವನ್ನು ಒಬ್ಬೊಬ್ಬ ಮುಂದಾಳುವಿಗೆ ಬಿಡಬಾರದು. ಯಾವನೇ ವ್ಯಕ್ತಿ ಸಂಘಟನೆ ಅಥವಾ ಜನಸಮುದಾಯಕ್ಕಿಂತ ಮೇಲಲ್ಲ."

ಕೆಲವು ಪ್ರಶ್ನೆಗಳು:

ಇಷ್ಟೆಲ್ಲ ಆತ್ಮ ವಿಮರ್ಶೆ ಮತ್ತು ತಪ್ಪೊಪ್ಪಿಗೆಗಳ ನಂತರವೂ ಕೆಲವೊಂದು ಪ್ರಶ್ನೆಗಳು ಬಗೆಹರಿಯದೆಯೇ ಉಳಿಯುತ್ತವೆ; ಅವುಗಳ ಬಗ್ಗೆ ಚೀನೀ ಮುಖಂಡರು ಅದೇಕೋ ಮೌನವಾಗಿದ್ದಾರೆ. ಕ್ರಾಂತಿ ಮತ್ತು ಪ್ರತಿಕ್ರಾಂತಿಯ ನಡುವೆ ನಡೆದ ಭೀಕರ ಸಮರವೆಂಬುದಾಗಿ ವರ್ಣಿಸಲ್ಪಟ್ಟಿರುವ ಸಾಂಸ್ಕೃತಿಕ ಕ್ರಾಂತಿಯ ಗತಿ-ಸೂತ್ರದ ನಿರ್ದೇಶನದಲ್ಲಿ ಮಾವೋ ಝೆಡಾಂಗ್ ಅವರ ಪಾತ್ರ ಏನೂ ಇರಲಿಲ್ಲವೇ? ಎಡ್ಗರ್ ಸ್ನೋ ಮೊದಲಾದ ಅನೇಕ ಬರಹಗಾರರು ಮಹಾನ್ ಸಾಂಸ್ಕೃತಿಕ ಕ್ರಾಂತಿಗೆ ಮಾವೋ ಅವರೇ ಪ್ರೇರಣೆ ಎಂದಿದ್ದಾರೆ. ಇದನ್ನು ಚೀನೀ ಮುಖಂಡರು ಈವರೆಗೂ ಅಲ್ಲಗಳೆದಿಲ್ಲ. ಕೆಲವೊಂದು ಅತಿರೇಕಗಳಿಗೆ ಲಿನ್‌ಬಿಯಾವೋ ಅಥವಾ ದುಷ್ಟ ಚತುಷ್ಟಯರ ಕೂಟವು ಕಾರಣವೆಂದು ಒಪ್ಪಿಕೊಂಡರೂ ಸಾಂಸ್ಕೃತಿಕ ಕ್ರಾಂತಿಯ ಕಾಲದ ತೀವ್ರ ಎಡ ಪಂಥವಾದಿ ಧೋರಣೆಗೆ ಮಾವೋ ಯಾವ ರೀತಿಯಲ್ಲೂ ಕಾರಣ ಕರ್ತರಲ್ಲವೆ? ಸ್ಟಾಲಿನ್ ಕಾಲದಲ್ಲಾದ ಕೆಲವು ತಪ್ಪುಗಳ ಕುರಿತು ಚೀನೀ ಕಮ್ಯುನಿಸ್ಟ್ ಪಕ್ಷ 1962-63 ರಲ್ಲೇ ಹೇಳಿಕೆ ನೀಡಿ ವ್ಯಕ್ತಿ ಪೂಜೆಗೆ ತನ್ನ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿತ್ತು. ರಾಜಕೀಯ ಮುಂದಾಳುಗಳ ಹುಟ್ಟುದಿನವನ್ನು ಆಚರಿಸುವುದರ ವಿರುದ್ಧ, ಅವರ ಹೆಸರುಗಳನ್ನು ನಗರಗಳಿಗೆ, ರಸ್ತೆಗಳಿಗೆ ನೀಡುವುದರ ವಿರುದ್ಧ ಮಾವೋ ಸಲಹೆಯ ಮೇರೆಗೆ ಚೀನೀ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ 1949 ರಷ್ಟು ಹಿಂದೆಯೇ ನಿರ್ಣಯವೊಂದನ್ನು ಅಂಗೀಕರಿಸಿತ್ತು. ಹಲವು ದಶಕಗಳ ಹೋರಾಟದ ಕುಲುಮೆಯಲ್ಲಿ ಪುಟಗೊಂಡ ಇಂತಹ ಕಮ್ಯುನಿಸ್ಟ್ ಪಕ್ಷವೊಂದು ಮಾವೋ ಅವರನ್ನು 'ಮಹಾ ನೇತಾರ', 'ಮಹಾ ಶಿಕ್ಷಕ' 'ಬದುಕಿರುವ ಶ್ರೇಷ್ಠ ಮಾರ್ಕ್ಸ್‌ವಾದಿ' ಎಂದು ಹೊಗಳಿ ಹತ್ತು ವರ್ಷ ಕಾಲಕ್ಕೂ ಮಿಕ್ಕಿ ಮಿತಿಮೀರಿ ಗುಣಗಾನ ಮಾಡಲು ಕಾರಣವೇನು? ಸಾಂಸ್ಕೃತಿಕ ಕ್ರಾಂತಿಯಲ್ಲಿ ನಡೆದ ಎಲ್ಲಾ ಅನಾಹುತಗಳಿಗೂ ಲಿನ್‌ಬಿಯಾವೋ ಅಥವಾ ದುಷ್ಟ ಚತುಷ್ಟಯರನ್ನು ಮಾತ್ರ ನಿಂದಿಸಿ ಅವರು 900 ಮಿಲಿಯ ಚೀನೀ ಜನತೆಗೆ ಅನ್ಯಾಯವೆಸಗಿದ್ದಾರೆನ್ನುವುದು, ಮಾವೋ ಬಗ್ಗೆ ಚಕಾರವೆತ್ತದಿರುವುದೂ ಕಮ್ಯುನಿಸ್ಟ್ ಪಕ್ಷ ಆತ್ಮವಿಮರ್ಶೆ ಮಾಡಿಕೊಳ್ಳುವ ರೀತಿಯಲ್ಲಿಲ್ಲ. ಇದು ಪ್ರಾಮಾಣಿಕ ಆತ್ಮವಿಮರ್ಶೆಯೂ ಅಲ್ಲ; ತಪ್ಪುಗಳ ಪ್ರಾಮಾಣಿಕ ಟೀಕೆಯೂ ಅಲ್ಲ.

ಹೀಗಿದ್ದರೂ ಚೀನೀ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳು ಈಗಲಾದರೂ ಮಾಡಿಕೊಳ್ಳುತ್ತಿರುವ ಸ್ವಯಂ ವಿಮರ್ಶೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸ್ವಾಗತಿಸುತ್ತದೆ. ಚೀನೀ ಕಮ್ಯುನಿಸ್ಟ್ ಪಕ್ಷ ಮಾಡಿದ್ದೆಲ್ಲ ಅನ್ಯಾಯವೆನ್ನುವವರ ವರ್ಗಕ್ಕೆ ನಾವು ಸೇರಿಲ್ಲ, ಅಥವಾ "ನೋಡಿದಿರಾ ಮಾವೋ ಬಗ್ಗೆ ನಾವು ಹೇಳಿದುದೆಲ್ಲ ಸತ್ಯವಾಯಿತಲ್ಲ" ಎನ್ನುವ ಕುಹಕಿಗಳೂ ನಾವಲ್ಲ. ಆದರೂ ಲಿನ್‌ಬಿಯಾವೋ ಮತ್ತು ದುಷ್ಟ ಚತುಷ್ಟಯರು ಸಾಂಸ್ಕೃತಿಕ ಕ್ರಾಂತಿಯ ವೇಳೆ ಅನುಸರಿಸಿದರೆನ್ನಲಾದ ತೀವ್ರ ಎಡಪಂಥೀಯ ಧೋರಣೆ ಚೀನಾದ ಜನತೆಯನ್ನು ಮಾತ್ರವಲ್ಲ, ವಿಶ್ವದ ಅನೇಕರಾಷ್ಟ್ರಗಳ ಯುವಕರನ್ನೂ ದಾರಿ ತಪ್ಪಿಸಲಿಲ್ಲವೇ ಎಂಬ ಪ್ರಶ್ನೆಯನ್ನೂ ನಾವು ಕೇಳಬೇಕಾಗುತ್ತದೆ. ಭಾರತದಲ್ಲೂ ನಕ್ಸಲೀಯರೆಂಬ ಹೆಸರಿನಲ್ಲಿ ಬೇರೆಬೇರೆ ಗುಂಪುಗಳಾಗಿ ಚದುರಿ ಹೋಗಿರುವವರು, "ಚೇರ್ಮನ್ ಮಾವೋ ಅವರೇ ನಮ್ಮ ಚೇರ್ಮನ್" 'ಮಾವೋವಾದ'ವೆಂದರೆ ಈ ಯುಗದ ಮಾರ್ಕ್ಸ್‌ವಾದ-ಲೆನಿನ್‌ವಾದ' ಎಂಬ ಘೋಷಣೆಗಳಿಗೆ ಮರುಳಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಈಗಲೂ ವಿಷ ಉಗುಳುತ್ತಿದ್ದಾರೆ. ಇವರಲ್ಲಿ ಕೆಲವರು ಈಗಲೂ ಲಿನ್‌ಬಿಯಾವೋ ಗುಂಪಿಗೆ ಸೇರಿಕೊಂಡವರೆಂದೂ ಹೇಳಿಕೊಳ್ಳುತ್ತಿದ್ದಾರೆ. ಇವರೆಲ್ಲ ಒಟ್ಟಾಗಿ ಸೋವಿಯತ್ ಒಕ್ಕೂಟವನ್ನು ಸಮಾಜವಾದಿ ಸಾಮ್ರಾಜ್ಯಶಾಹಿ ರಾಷ್ಟ್ರವೆಂದೂ ಕರೆಯುತ್ತಿದ್ದಾರೆ. ಇದೀಗ ಚೀನೀ ಕಮ್ಯುನಿಸ್ಟ್ ಪಕ್ಷದೊಳಗೆ ನಡೆಯುತ್ತಿರುವ ಆಂತರಿಕಸಂಘರ್ಷ ಈ ಜನರ ಮೇಲೆ ಪರಿಣಾಮ ಬೀರಿ ಅವರು 1966-67 ರಿಂದ ತಾವು ಅನುಸರಿಸಿಕೊಂಡು ಬಂದಿದ್ದ ಮಾರ್ಗದ ಬಗ್ಗೆ ಪುನರ್ವಿಮರ್ಶೆ ನಡೆಸುವಂತೆ ಮಾಡೀತೇ? ●

ಕೃಷಿಕೂಲಿಗಾರರ ಬೇಡಿಕೆ ಈಡೇರಿಕೆ

ದಕ್ಷಿಣ ಕನ್ನಡದ ಸಾಲಿಗ್ರಾಮ ನಗರ ಸಭೆಯ ವ್ಯಾಪ್ತಿಗೆ ಒಳಪಟ್ಟು ಆಸುಪಾಸಿನ ನಾಲ್ಕು ಗ್ರಾಮಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಸಂಘಟನೆಯ ನೇತೃತ್ವದಲ್ಲಿರುವ ಕೃಷಿಕೂಲಿಗಾರರು ತಮ್ಮ ಕೂಲಿ ಹೆಚ್ಚಳಕ್ಕಾಗಿ ಹೋರಾಟ ನಡೆಸಿದರು. ಇದರ ಫಲವಾಗಿ ಅಕ್ಟೋಬರ್ 17 ರಂದು ಕೃಷಿ ಕೂಲಿಗಾರರು ಮತ್ತು ಭೂಮಾಲಕರ ಮಧ್ಯೆ ಒಪ್ಪಂದವೇರ್ಪಟ್ಟು, ನೇಜಿ ಮತ್ತು ಕೊಯ್ಲಿಗೆ ಖಡ್ಡಾಯವಾಗಿ 8 (ಎಂಟು) ಸೇರು ಬತ್ತವನ್ನು ಕೂಲಿಗೆ ಕೊಡಬೇಕೆಂದು ತೀರ್ಮಾನಿಸಲಾಯಿತು.

ಹೋರಾಟದ ಸಮಯದಲ್ಲಿ ಕೃಷಿ ಕೂಲಿಗಾರರು ತಮ್ಮ ಕೇಳಿಕೆಯನ್ನು ಗ್ರಾಮ, ಕೇರಿಕೇರಿಗಳಲ್ಲಿ ಪ್ರಚಾರ ನಡೆಸಿದ್ದರು. ಚರ್ಚೆಯಲ್ಲಿ ಕಾಂ.ಅಬ್ರಹಾಂ ಕರ್ಕಡ ಮತ್ತು ಕಾಂ. ವಿಠಲ್ ಪೂಜಾರಿಯವರೂ, ಭೂಮಾಲಕರ ಪರವಾಗಿ ಸ್ಥಳೀಯ ನಗರಸಭೆಯ ಅಧ್ಯಕ್ಷರೂ ಮತ್ತು ಇನ್ನಿತರರು ಭಾಗವಹಿಸಿದ್ದರು. ●

ಕೇರಳ–ಪಂಚಾಯತ್ ಅಧ್ಯಕ್ಷರ ಚುನಾವಣೆ
908 ಸ್ಥಾನಗಳಲ್ಲಿ 511 ಸ್ಥಾನಗಳಿಗೆ
ಸಿ. ಪಿ. ಐ.(ಎಂ) ಅಭ್ಯರ್ಥಿಗಳ ಆಯ್ಕೆ

ಕೇರಳ ರಾಜ್ಯದ ಮೂರು ಮಹಾನಗರ ಪಾಲಿಕೆಗಳು, 31 ನಗರ ಸಭೆಗಳು ಮತ್ತು ಒಟ್ಟು 997 ಪಂಚಾಯತ್‌ಗಳಲ್ಲಿ ಚುನಾವಣೆ ನಡೆದ 931 ಪಂಚಾಯತುಗಳ ಚುನಾವಣಾ ಫಲಿತಾಂಶವನ್ನು ಈಗಾಗಲೇ ವರದಿ ಮಾಡಲಾಗಿದೆ.

ಒಟ್ಟು 8874 ಪಂಚಾಯತ್ ಸದಸ್ಯರ ಸ್ಥಾನಗಳಲ್ಲಿ ಸಿ. ಪಿ. ಐ. (ಎಂ) ಮತ್ತು ಅದರ ಬೆಂಬಲಿತ ಪಕ್ಷಾತೀತ ಉಮೇದ್ವಾರರು 3812 ಸ್ಥಾನಗಳನ್ನು ಗೆದ್ದಿದ್ದಾರೆ. ಸಿ. ಪಿ. ಐ. (ಎಂ)ನೊಂದಿಗೆ ಹಲವಾರು ಕಡೆ ಚುನಾವಣಾ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್ 1150 ಕ್ಕೂ ಮಿಕ್ಕಿ ಸ್ಥಾನಗಳನ್ನು ಗಳಿಸಿದೆ. ಆಡಳಿತ ಮುಸ್ಲಿಂ ಲೀಗ್ 700 ಸ್ಥಾನಗಳನ್ನು ಗಳಿಸಿದರೆ ಕಾಂಗ್ರೆಸ್ (ಐ) 670 ಸ್ಥಾನಗಳನ್ನೂ, ಸಿ.ಪಿ.ಐ. ಸುಮಾರು 250 ಸ್ಥಾನಗಳನ್ನೂ ಗಳಿಸಿವೆ.

ಕೇರಳದ ಮೂರು ಮಹಾನಗರ ಪಾಲಿಕೆಗಳಾದ ತ್ರಿವೆಂಡ್ರಮ್, ಕೊಚ್ಚಿ ಮತ್ತು ಕಲ್ಲಿಕೋಟೆಗಳಲ್ಲಿ ಸಿ. ಪಿ. ಐ. (ಎಂ) ಮತ್ತು ಅದರ ಮಿತ್ರಪಕ್ಷಗಳು ಬಹುಮತವನ್ನು ಪಡೆದಿವೆ. ಈ ಮೂರೂ ಮಹಾನಗರಗಳ ಮೇಯರ್ ಸ್ಥಾನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳಾದ ಎಮ್. ಪಿ. ಪದ್ಮನಾಭನ್ (ತ್ರಿವೆಂಡ್ರಮ್) ಕೆ. ಬಾಲಚಂದ್ರನ್ (ಕೊಚ್ಚಿ) ಮತ್ತು ಪಿ. ಕುಟ್ಟಿಕೃಷ್ಣನ್ ನಾಯರ್ (ಕಲ್ಲಿಕೋಟೆ) ಇವರು ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಪದವಿಗೆ ಚುನಾವಣೆಗಳು ನಡೆದಿರುವ 908 ಪಂಚಾಯತುಗಳಲ್ಲಿ ಸಿ. ಪಿ. ಐ. (ಎಂ)511, ಮತ್ತು ಕಾಂಗ್ರೆಸ್ 120 ಪಂಚಾಯತ್‌ಗಳಲ್ಲಿ ವಿಜಯಿಯಾಗಿವೆ. ಇಂದಿರಾ ಕಾಂಗ್ರೆಸ್ ಕೇವಲ 33 ಪಂಚಾಯತುಗಳಲ್ಲೂ ಸಿ. ಪಿ. ಐ. ಹದಿಮೂರು ಪಂಚಾಯತುಗಳಲ್ಲಿ ಮಾತ್ರ ಜಯಗಳಿಸಲು ಶಕ್ತವಾಗಿವೆ. ಪಕ್ಷಾತೀತರು ಮತ್ತು ಇತರ ಪಕ್ಷಗಳು (ಮುಸ್ಲಿಂಲೀಗ್ ಸೇರಿದಂತೆ) 231 ಪಂಚಾಯತ್ ಅಧ್ಯಕ್ಷ ಸ್ಥಾನವನ್ನು ಪಡೆದಿದ್ದಾರೆ. ನಗರ ಸಭೆಗಳ ಅಧ್ಯಕ್ಷ ಸ್ಥಾನಗಳಿಗೆ ಚುನಾವಣೆಗಳು ಇದೀಗ ನಡೆಯುತ್ತಿವೆ.

ಬೀಡಿ ಕಾರ್ಮಿಕರಿಂದ ರಾಜ್ಯದಾದ್ಯಂತ ಬೇಡಿಕೆ ದಿನಾಚರಣೆ

ಅಕ್ಟೋಬರ್ 17 ರಂದಿನ ಬೀಡಿ ಕಾರ್ಮಿಕರ ಬೇಡಿಕೆ ದಿನಾಚರಣೆಯ ಬಗ್ಗೆ ಕೆಲವು ಕಡೆಯ ವರದಿಗಳು ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿದ್ದು, ತಡವಾಗಿ ಬಂದ ವರದಿಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ತುಮಕೂರು

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ 'ಬೇಡಿಕೆ ದಿನಾಚರಣೆಯ' ಕರೆಯ ಮೇರೆಗೆ ತುಮಕೂರು ನಗರದ ಬೀಡಿ ಕಾರ್ಮಿಕರು ಸಾವಿರ ಬೀಡಿಗಳ ಕೂಲಿ 8-00 ರೂ. ಸಿಗಲಿ! ಕಂಟ್ರಾಕ್ಟ್ ಪದ್ಧತಿ ರದ್ದಾಗಲಿ! ಹೆರಿಗೆ ರಜ, ಪ್ರಾವಿಡೆಂಟ್ ಫಂಡ್, ಲಾಗ್‌ಬುಕ್‌ಗಳನ್ನು ಕಾನೂನಿನ ಪ್ರಕಾರ ಕಾರ್ಖಾನೆಯ ಮಾಲೀಕರು ದೊರಕಿಸಲಿ! ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೇ ಒಂದಾಗಿರಿ! ಎಂಬ ಘೋಷಣೆಗಳನ್ನು ಮಹಿಳಾ ಕಾರ್ಮಿಕರನ್ನೊಳಗೊಂಡ ನೂರಾರು ಜನ ಬೀಡಿ ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲಿ ಕೂಗುತ್ತಾ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ತಮ್ಮ ಮನವಿಪತ್ರವನ್ನು ಅರ್ಪಿಸಿದರು.

ಮೆರವಣಿಗೆಯಲ್ಲಿ ರಾಜ್ಯದ ಬೀಡಿ ಕಾರ್ಮಿಕರ ಫೆಡರೇಷನ್ನಿನ ಉಪಾಧ್ಯಕ್ಷರಾದ ಕಾಂ. ಕೆ. ಆರ್. ನಾಯಕ್, ರಾಜ್ಯದ ಸಿ.ಐ.ಟಿ.ಯು. ವಿನ ಉಪಾಧ್ಯಕ್ಷರಾದ ಕಾಂ. ಮಹಮದ್ ದಸ್ತಗೀರ್, ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ಕಾಂ. ಸೈಯದ್ ಅನ್ವರ್, ಕಾಂ. ಹಾಜರಾಂಬಿ ಮತ್ತಿತರರು ಭಾಗವಹಿಸಿದ್ದರು.

ಅಳಪೆ ಪ್ರದೇಶ

ತಾ. 17-10-79 ರಂದು ಮಂಗಳೂರು ತಾಲ್ಲೂಕು ಅಳಪೆ ಪ್ರದೇಶದ ಬೀಡಿ ಲೇಬರ್ ಯೂನಿಯನ್ ಆಶ್ರಯದಲ್ಲಿ ನಾಗುರಿಯಲ್ಲಿ ಪಿ. ಲಿಂಗಪ್ಪರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆಯಿತು. ಯೂನಿಯನ್ನಿನ ಕಾರ್ಯದರ್ಶಿಯಾದ ಕಾಂ. ರಂಗಪ್ಪ ಸಾಲಿಯನ್ ರವರು ಸ್ವಾಗತಿಸಿದರು. ಬೀಡಿ ಮಜೂರರ ಇವತ್ತಿನ ಕೇಳಿಕೆಗಳನ್ನು ಪಡೆಯಲು ಹೋರಾಟ ನಡೆಸಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಕಾಂ. ಕೆ.ಪಿ. ನಾಲಿಯನ್‌ರವರು ಸಂಘಟನೆಯ ಅಗತ್ಯವನ್ನು ಹೇಳಿ ಮಜೂರರು ಒಗ್ಗಟ್ಟಾಗಿ ಈಗಿರುವ ಬೀಡಿ ಕಾರ್ಮಿಕರ ಸಂಕಷ್ಟವನ್ನು ನಿವಾರಿಸಲು ಮುಂದಾಗಬೇಕೆಂದು ಕೇಳಿಕೊಂಡು ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಮೈಸೂರು

ತಾ. 11-10-79 ರಂದು ಮೈಸೂರಿನಲ್ಲಿರುವ ಜ್ಯೋತಿ ಹೋಂ ಇಂಡಸ್ಟ್ರೀಸ್ ಮ್ಯಾನೇಜಿಂಗ್ ಪಾರ್ಟ್‌ನರ್ ರವರಿಗೆ 1000 ಬೀಡಿಗೆ 9 ರೂಪಾಯಿ ಕೂಲಿ, ಶೇಕಡಾ 20 ಬೋನಸ್ಸು, ಬೀಡಿಎಲೆ ಎವರೇಜು ಕಡಿಮೆ ಮಾಡಬೇಕು, ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು, ವಾರದಲ್ಲಿ 6 ದಿನ ಕೆಲಸ ಕೊಡಬೇಕು, ಕೆಲಸ ಒದಗಿಸದಿದ್ದ ದಿನಗಳಿಗೆ ಕೂಲಿಕೊಡಬೇಕು ಇತ್ಯಾದಿಗಳ ಬೇಡಿಕೆ ನೋಟೀಸನ್ನು ಕೊಡಲಾಗಿತ್ತು. ಈ ಬೇಡಿಕೆಗಳನ್ನು ಪ್ರಚಾರಗೊಳಿಸಲು ತಾ. 15 ಮತ್ತು 16 ರಂದು ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಬೀದಿಯ ಅಂಚಿನ ಸಭೆಗಳನ್ನು ನಡೆಸಲಾಯಿತು. ತಾ. 17 ರಂದು ಜ್ಯೋತಿ ಹೋಂ ಇಂಡಸ್ಟ್ರೀಸ್ ಡಿಪೋ ಮುಂದೆ ಬೆಳಿಗ್ಗೆ 10 ಘಂಟೆಯಿಂದ ಮಧ್ಯಾಹ್ನ 2 ಘಂಟೆಯವರೆವಿಗೆ ಕೆಲಸಗಾರರು ಧರಣಿ ಕೂತರು. ನಂತರ ಕೆಲಸಗಾರರು ಘೋಷ ಇರುವ ಮಹಿಳೆಯರೂ ಸೇರಿರುವ ಪ್ರದರ್ಶನ ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ಬಹಿರಂಗ ಸಭೆಯಲ್ಲಿ ಮುಕ್ತಾಯಗೊಂಡಿತು. ಪ್ರಧಾನ ಕಾರ್ಯದರ್ಶಿ ಕಾಂ. ಸಯ್ಯದ್ ಮತ್ತು ಮಹಮದ್ ಇಸ್‌ಮೈಯಿಲ್‌ರವರು ಬೇಡಿಕೆಗಳನ್ನು ಬೀಡಿಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಕಾಂ. ಎಂ.ಎನ್. ಉಗ್ರಪ್ಪನವರು ದೇಶದಾದ್ಯಂತ ಬೀಡಿ ಕಾರ್ಮಿಕರು ಸಂಘಟಿತರಾಗುತ್ತಿರುವುದನ್ನು ವಿವರಿಸಿ, ಇದರಲ್ಲಿ ಸಿ. ಐ. ಟಿ. ಯು. ವಿನ ಮುಖ್ಯ ಪಾತ್ರವನ್ನು ಹೇಳಿದರು. ತಮ್ಮ ಸಂಘಟನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಬೀಡಿಕಾರ್ಮಿಕರಲ್ಲಿ ಮನವಿ ಮಾಡಿಕೊಂಡರು ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಮಂಗಳೂರು

ಅಖಿಲ ಭಾರತ ಬೀಡಿ ಕೆಲಸಗಾರರ ಸಮಿತಿಯು ಕರೆಕೊಟ್ಟ ಮೇರೆಗೆ ಮಂಗಳೂರು ಬೀಡಿಕೆಲಸಗಾರರ ಸಂಘವು ತಾ. 17-10-79 ರಂದು ಸಂಜೆ ಗಂಟೆ 6-30ಕ್ಕೆ ಅತ್ತಾವರ ಬಾಬುಗುಡ್ಡೆ ಮೈದಾನಿನಲ್ಲಿ ಕಾಮ್ರೇಡ್ ಎ. ಕೆ. ನಾರಾಯಣರ ಅಧ್ಯಕ್ಷತೆಯಲ್ಲಿ ಬೀಡಿ ಕೆಲಸಗಾರರ ಬೇಡಿಕೆ ದಿನವನ್ನು ಆಚರಿಸಿತು. ಪ್ರಾರಂಭದಲ್ಲಿ ಕಾಂ. ಉಮಾನಾಥರು ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು, ಸಾವಿರ ಬೀಡಿಗೆ 9 ರೂಪಾಯಿ ಮಜೂರಿ ಸಿಕ್ಕಬೇಕು, 20% ಬೋನಸ್ಸು ಕೊಡಬೇಕೆಂದು ಹೇಳಿ ಸಭೆಯನ್ನು ಸ್ವಾಗತಿಸಿ ಮಾತನಾಡಿದರು.

ಮಂಗಳೂರು ಬೀಡಿಕಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಜೆ. ವೀರಪ್ಪನವರು ಬೀಡಿ ಮಜೂರರ ಕಷ್ಟಗಳನ್ನು ವಿವರಿಸಿ, ಲೇಬರ್ ವೆಲ್‌ಫೇರ್ ಅನುಕೂಲತೆ ಸರಿಯಾಗಿ ಮಜೂರರಿಗೆ ಸಿಕ್ಕಬೇಕು. ವಾರಕ್ಕೆ ಆರು ದಿನ ಎಲ್ಲಾ ಮಜೂರರಿಗೆ ಕೆಲಸ ಸಿಕ್ಕಬೇಕೆಂದು ಹೇಳಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಅಖಿಲ ಭಾರತ ಬೀಡಿ ಕೆಲಸಗಾರರ ಸಮಿತಿ ತೀರ್ಮಾನಿಸಿದ ಎಲ್ಲಾ ಕೇಳಿಕೆಗಳು ಜಯಪ್ರದಗೊಳಿಸಲು ಎಲ್ಲಾ ಬೀಡಿಕಾರ್ಮಿಕರು ಐಕ್ಯದಿಂದ ಹೋರಾಡಬೇಕೆಂದೂ ಮತ್ತು ತಮ್ಮ ಸಂಘವನ್ನು ಬಲಪಡಿಸಬೇಕೆಂದೂ ಕರೆ ಇತ್ತರು.

ಕಾಂ. ಉಮಾನಾಥರು ಧನ್ಯವಾದ ಅರ್ಪಿಸಿದ ನಂತರ ಸಭೆ ಮುಕ್ತಾಯವಾಯಿತು.

ಗುರುಪುರ-ಸುರತ್‌ಕಲ್

ತಾ. 17-10-1979 ರಂದು ದ. ಕ. ಜಿಲ್ಲಾ ಗುರುಪುರ-ಸುರತ್‌ಕಲ್ ಪ್ರದೇಶದ ಬೀಡಿ ಯೂನಿಯನ್ ಆಶ್ರಯದಲ್ಲಿ ಬೀಡಿಕಾರ್ಮಿಕರ ಸಾರ್ವಜನಿಕ ಸಭೆಯು ಸಂಜೆ ಗಂಟೆ 4ಕ್ಕೆ ಕುಪ್ಪೆ ಪದವಿನಲ್ಲಿ ಕಾಂ. ಎಂ. ಎನ್. ನಾರಾಯಣರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂ. ಎವ್. ಕೃಷ್ಣರವರು ಸ್ವಾಗತಿಸಿದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿಯಾದ ಕಾಂ. ಯು. ಜನಾರ್ಧನ ನಾಯಕ್ ಬೀಡಿಕಾರ್ಮಿಕರ ಕೇಳಿಕೆಯ ಕುರಿತು ಮಾತನಾಡಿ ಕಾರ್ಮಿಕರು ಹೋರಾಟ ಮಾಡಿ ಕೂಲಿಯನ್ನು ಪಡೆಯಲು ಹಾಗೂ ಬಾಕಿ ಸವಲತ್ತುಗಳನ್ನು ಪಡೆಯಲು ಸಂಘಟಿತರಾಗಬೇಕೆಂದು ಕೇಳಿಕೊಂಡರು. ಅಧ್ಯಕ್ಷರು ಬ್ರಾಂಚ್‌ನಲ್ಲಿ ಬೀಡಿ ಕಂಟ್ರಾಕ್ಟರ್ ಕೊಡುವ ಕಿರುಕುಳವನ್ನು ಖಂಡಿಸಿದರು. ಕಾಂ. ಹೊನ್ನಯ್ಯರವರು ಧನ್ಯವಾದಗಳನ್ನು ಕೊಟ್ಟು ಸಭೆಯು ಮುಕ್ತಾಯವಾಯಿತು.

ಬಂಟ್ವಾಳ

ದ. ಕ. ಜಿಲ್ಲೆಯ ಬಂಟ್ವಾಳದಲ್ಲಿ ಯಶವಂತ ವ್ಯಾಯಾಮ ಶಾಲೆಯಲ್ಲಿ ಕಾಂ. ಬಿ. ಎಚ್. ಬಂಗೇರರ ಅಧ್ಯಕ್ಷತೆಯಲ್ಲಿ ಬೀಡಿಕಾರ್ಮಿಕರ ಸಭೆ ಸೇರಿತು. ಕಾಂ. ಬಿ. ಮಂಜುನಾಥನವರು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಅಖಿಲ ಭಾರತ ಬೀಡಿ ಫೆಡರೇಶನ್ನಿನ ತೀರ್ಮಾನದಂತೆ ಸಾವಿರ ಬೀಡಿಗೆ ರೂ.9ಕನಿಷ್ಟ ಕೂಲಿನಿಗದಿ ಮಾಡುವಂತೆಯೂ ಶೇ. 20 ಬೋನಸ್ಸು ಕೊಡುವಂತೆಯೂ ಹಾಗೂ ಮತ್ತಿತರ ಬೇಡಿಕೆಗಳನ್ನು ಮನ್ನಿಸುವಂತೆಯೂ ಸರಕಾರ ಮತ್ತು ಮಾಲಕರನ್ನು ಒತ್ತಾಯಿಸಲು ಸಂಘಟಿತ ಹೋರಾಟ ಮಾಡಲು ಕರೆ ಇತ್ತರು. ಕಾಂ. ಬಿ. ಗೋಪಾಲನವರು ಸ್ವಾಗತ ಭಾಷಣ ಮಾಡಿದರು. ಕಾಂ. ಬಿ. ಕೂಸಪ್ಪಗಟ್ಟಿಯವರು ಧನ್ಯವಾದ ಇತ್ತರು.

●

ಹರಿಹರದಲ್ಲಿ ಬೃಹತ್ ಮೆರವಣಿಗೆ

ತಾ. 17-10-79ನೇ ಬುಧವಾರ ಚಿತ್ರದುರ್ಗ ಜಿಲ್ಲೆಯ ಹರಿಹರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ. ಐ. ಟಿ. ಯು. ನೇತೃತ್ವದಲ್ಲಿ ಭಾರೀ ಮೆರವಣಿಗೆಯನ್ನು ನಡೆಸಲಾಯಿತು. ಬೀಡಿಕಾರ್ಮಿಕರ ಬೇಡಿಕೆಗಳಾದ ಒಂದು ಸಾವಿರ ಬೀಡಿಗೆ 9 ರೂ. ಕೂಲಿ, ಶೇಕಡ 20 ರಷ್ಟು ಬೋನಸ್, ಕಾಂಟ್ರಾಕ್ಟ್ ಪದ್ಧತಿ ರದ್ದತಿ, ಮುಂತಾದ ಬೇಡಿಕೆಗಳು ಮತ್ತು ಬಡ ಕೂಲಿಗಾರರು ಹರಿಹರದಲ್ಲಿ ಅಲ್ಲಲ್ಲಿ ಕೊಳಚೆ ಪ್ರದೇಶನಲ್ಲಿ ವಾಸಮಾಡುವವರಿಗೆ ಪುರಸಭೆಯಿಂದ ಉಚಿತವಾಗಿ ಮನೆಗಳನ್ನು ಕಟ್ಟಿಕೊಳ್ಳಲು ಖಾಲಿ ನಿವೇಶನಗಳನ್ನು ಕೊಟ್ಟು ಇವರೂ ಕೂಡ ಹರಿಹರದ ನಾಗರಿಕ ಜನತೆಯಾಗಿ ಜೀವಿಸಲು ಅವಕಾಶ ಮಾಡಿಕೊಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಪುರಸಭೆ ಅಧ್ಯಕ್ಷರ ಗೈರು ಹಾಜರಿಯಲ್ಲಿ ಪುರಸಭೆಯ ಅಧಿಕಾರಿ ವರ್ಗದವರಿಗೂ ಮತ್ತು ತಹಸೀಲ್ದಾರರಿಗೂ ಮನವಿಗಳನ್ನು ಅರ್ಪಿಸಲಾಯಿತು.

ಬೀಡಿಕಾರ್ಮಿಕರು, ನೇಯ್ಗೆ ಕಾರ್ಮಿಕರು, ಮತ್ತು ಹರಿಹರದ ಗುಡಿಸಲು ವಾಸಿಗಳನ್ನೊಳಗೊಂಡ ಈ ಮೆರವಣಿಗೆಯಲ್ಲಿ ಸುಮಾರು 500 ಜನರು ಭಾಗವಹಿಸಿದ್ದರು. ಹೆಚ್ಚಿನದಾಗಿ ಮಹಿಳೆಯರೇ ಭಾಗವಹಿಸಿದ್ದುದು ಈ ಮೆರವಣಿಗೆಗೆ ಒಂದು ಪ್ರತಿಭೆಯನ್ನು ತಂದು ಕೊಟ್ಟಿದ್ದಿತು.

ಮೆರವಣಿಗೆಯ ನೇತೃತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರು ಮತ್ತು ಸಿ. ಐ. ಟಿ. ಯು. ಮುಖಂಡರುಗಳು ವಹಿಸಿದ್ದರು. ಮೆರವಣಿಗೆಯಲ್ಲಿ ಸಿ. ಐ. ಟಿ. ಯು. ರಾಜ್ಯಸಮಿತಿಯ ಉಪಾಧ್ಯಕ್ಷರಾದ ಕಾಂ. ಎನ್. ಕೆ. ಉಪಾಧ್ಯಾಯರೂ ಭಾಗವಹಿಸಿದ್ದರು.

○

ಬಸ್ರೂರಲ್ಲಿ ಬೀಡಿಕಾರ್ಮಿಕರ ಸಭೆ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕಿನ ಬಸ್ರೂರಿನಲ್ಲಿ ಬೀಡಿಕಾರ್ಮಿಕರ ಪ್ರಥಮ ಸಭೆಯು 21-10-79 ರಂದು ಸಿ. ಐ. ಟಿ. ಯು. ಮುಖಂಡ ಕಾಂ. ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ವಿ. ಮಹಾಬಲನವರು ಸ್ವಾಗತ ಭಾಷಣ ಮಾಡಿದರು. ಕಾಂ. ವಿ. ಮಹಾಬಲದೇವಾಡಿಗನವರು ಧನ್ಯವಾದ ಅರ್ಪಿಸಿದರು. ಸಭೆಯು ಈ ಕೆಳಗಿನ ಹತ್ತು ಮಂದಿ ಸದಸ್ಯರ ಒಂದು ಸಮಿತಿಯನ್ನು ಆಯ್ಕೆ ಮಾಡಿತು.

ಶ್ರೀಮತಿ ವಿಶಾಲಾಕ್ಷಿಯವರು ಅಧ್ಯಕ್ಷೆ, ಶ್ರೀಮತಿ ಮಂಗಳನವರು ಕಾರ್ಯದರ್ಶಿ, ಪಾರ್ವತಿ, ಸುಶೀಲಾ, ಚಂದ್ರಾವತಿ, ಶಾರದ, ನಿರ್ಮಲ, ಜಲಜ, ಶೋಭ ಮತ್ತು ಗಿರಿಜರವರು ಸಮಿತಿ ಸದಸ್ಯರಾಗಿಯೂ ಆಯ್ಕೆಯಾದರು. ○

ಶಾಂತಿ ಸಮಿತಿಗೆ ಆಯ್ಕೆ

ಕುದುರೆಮುಖ ಕಾರ್ಮಿಕರಲ್ಲಿ ಪರಸ್ಪರ ಸೌಹಾರ್ದತೆಯನ್ನು ಮೂಡಿಸುವುದಕ್ಕೆ ಸಹಾಯ ಮಾಡಲು ಚಿಕ್ಕಮಗಳೂರು ಜಿಲ್ಲಾ ಡೆಪ್ಯೂಟಿ ಪೋಲೀಸ್ ಸೂಪರಿಡೆಂಟ್‌ರವರು ತಾ. 15-9-79 ರಂದು ವಿವಿಧ ಕಾರ್ಮಿಕ ಸಂಘಗಳ ನಾಯಕರನ್ನು ಒಳಗೊಂಡ "ಶಾಂತಿ ಸಮಿತಿ"ಯನ್ನು ರಚಿಸಿದ್ದಾರೆ.

"ಶಾಂತಿ ಸಮಿತಿ"ಯ ಸಂಚಾಲಕರಾಗಿ ಸಿ. ಐ. ಟಿ. ಯು. ಮುಖಂಡ ಕಾಂ. ರಾಮದಾಸ್ ಆಚಾರ್ಯರವರು ಆಯ್ಕೆಯಾಗಿದ್ದಾರೆ.

ಸಮಿತಿಯು ವಾರಕ್ಕೆ ಎರಡು ದಿನ ಸೇರಿ ಬರುವ ದೂರುಗಳನ್ನು ಪರಿಶೀಲಿಸಬೇಕು, ಶಾಂತಿ ಸಮಿತಿಯ ಬಗ್ಗೆ ತಿಳುವಳಿಕೆ ನೀಡಲು ಸಾರ್ವಜನಿಕ ಭಾಷಣ ಹಾಗೂ ಕರಪತ್ರಗಳನ್ನು ಹಂಚಬೇಕೆಂದು ಸಹಾ ಸಭೆ ನಿರ್ಧರಿಸಿತು.

ಎ. ಐ. ಟಿ. ಯು. ಸಿ. ಮುಂತಾದ ಇತರೆ ಕಾರ್ಮಿಕ ಸಂಘಟನೆಗಳ ಮುಖಂಡರುಗಳು ಸಹಾ ಸಮಿತಿಯಲ್ಲಿದ್ದಾರೆ.

○

ಹರಿಹರದಲ್ಲಿ ಸಿ. ಐ. ಟಿ. ಯು. ವಿನ ಬಹಿರಂಗ ಸಭೆ

ತಾ. 17-10-79 ನೇ ಬುಧವಾರ ಸಂಜೆ ಹರಿಹರದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಕಾಂ. ಎನ್. ಕೆ. ಉಪಾಧ್ಯಾಯ ಇವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ನಮ್ಮ ದೇಶದ ಬಂಡವಾಳಶಾಹಿ ನೀತಿಯನ್ನು ಕಟುವಾಗಿ ಟೀಕಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮುರಾರ್ಜಿ ದೇಸಾಯಿಯವರ ಸರ್ಕಾರಕ್ಕೆ ಈ ಹಿಂದೆ ಬೆಂಬಲ ಕೊಟ್ಟಿದ್ದರ ಹಿನ್ನೆಲೆಯನ್ನು ವಿವರಿಸಿದರಲ್ಲದೆ, ಅವರು ಚುನಾವಣೆಯಲ್ಲಿ ಮತ್ತು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಲು ಏನೇನೂ ಪ್ರಯತ್ನಿಸಲಿಲ್ಲ. ಬದಲಾಗಿ ಕೇವಲ ಸ್ವಮೂತ್ರಪಾನ ಮತ್ತು ಮಧ್ಯಪಾನ ನಿಶೇಧಗಳೆಂಬ ಎರಡೇ ಘೋಷಣೆಗಳೊಂದಿಗೆ ಸಮಯ ಕಳೆದರು ಮತ್ತು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸಿದ್ದರಿಂದ ನಮ್ಮ ಪಕ್ಷವು ಅವರಿಗೆ ಕೊಟ್ಟಿದ್ದ ಬೆಂಬಲವನ್ನು ಹಿಂದೆಗೆಯಿತೆಂದೂ ಹೇಳಿದರು. ದೇಶದಲ್ಲಿ ದುಡಿಯುವ ವರ್ಗದ ಸರ್ಕಾರ ರಚನೆಯಾಗುವವರೆಗೆ ಸಿ. ಐ. ಟಿ. ಯು. ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಅವಿಶ್ರಾಂತ ಹೋರಾಟ ನಡೆಸುವುದೆಂದೂ ತಿಳಿಸಿದರು. ದೇಶದಲ್ಲಿ ರೈತ ಮತ್ತು ಕಾರ್ಮಿಕರ ಮಧ್ಯೆ ವಿಶ್ವಾಸದಿಂದ ಕೆಲಸ ಮಾಡುತ್ತಿರುವುದು ಕೇವಲ ಸಿ. ಐ. ಟಿ. ಯು. ಸಂಘಟನೆ ಮಾತ್ರವೆಂದು ಕೂಡ ತಿಳಿಸಿದರು.

ಬೀಡಿಕಾರ್ಮಿಕರ, ಪಾಲಿಫೈಬರ್ಸ್ ಕಂಟ್ರಾಕ್ಟ್ ಕೆಲಸಗಾರರ ಮತ್ತು ಲಾರಿ ಡ್ರೈವರ್ಸ್‌ಗಳ ಬೇಡಿಕೆಯ ದಿನದ ಅಂಗವಾಗಿ ಈ ಸಭೆಯನ್ನು ಏರ್ಪಡಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಕಿರ್ಲೋಸ್ಕರ್ ಕಾರ್ಮಿಕರಾದ ಕಾಂ. ಸದಾಶಿವಪ್ಪನವರು ವಹಿಸಿದ್ದರು. ಸಭೆಯಲ್ಲಿ ಕಾಂ. ಡಿ. ಜಿ. ಜೋಶಿ, ಕಾಂ. ಕುಟ್ಟಪ್ಪನಾಯರ್, ಕಾಂ. ಮದಾರ್ ಸಾಬ್ ಮೊದಲಾದವರು ಮಾತನಾಡಿದರು. ●

ಭಾಷೆಯ ಹೆಸರಿನಲ್ಲಿ ಕಾರ್ಮಿಕರ ಸಂಘಟನೆ ಒಡೆಯಲು ಯತ್ನ—ಐ.ಎನ್.ಟಿ.ಯು.ಸಿ. ಗುಪ್ತ ಬೆಂಬಲ

ಮಂಗಳೂರು ನವ ಬಂದರಿನಲ್ಲಿರುವ ಕುದುರೆಮುಖ ಕಬ್ಬಿಣದ ಅದುರು ಯೋಜನೆಯಲ್ಲಿ ದೇಶದ ನಾನಾ ಭಾಗಗಳಿಂದ ಬಂದಿರುವ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಕೇರಳ ರಾಜ್ಯದಿಂದ ಬಂದಿರುವ ಕೆಲಸಗಾರರೇ ಹೆಚ್ಚಾಗಿದ್ದಾರೆ. ಕೇರಳದ ಕೆಲಸಗಾರರು ಹೆಚ್ಚಾಗಿ ಸಿ. ಐ. ಟಿ. ಯು. ಸಂಘಟನೆಯ ಅಡಿಯಲ್ಲಿ ಸಂಘಟಿತರಾಗಿರುವುದು ಹಾಗೂ ಇತರೆ ಕಾರ್ಮಿಕರನ್ನು ಸಹಾ ಒಂದುಗೂಡಿಸಿ ಐಕ್ಯತೆಯಿಂದ ಕಾರ್ಮಿಕರ ಹಿತಕ್ಕಾಗಿ ದುಡಿಯುತ್ತಾ ಬಂದಿರುವುದು ಐ. ಎನ್. ಟಿ. ಯು. ಸಿ. ನಾಯಕರಿಗೆ ಸಹಿಸದಾಗಿದೆ.

ಆದ್ದರಿಂದ ಸ್ಥಳೀಯ ಭೂ ಮಾಲಕ ಶ್ರೀನಿವಾಸ ಪಟೇಲ ಎನ್ನುವವರ ನೇತೃತ್ವದಲ್ಲಿ "ನಿರುದ್ಯೋಗಿ ಸಂಘ" ಎಂಬ ಹೆಸರಿನ ಸಂಘವನ್ನು ಸ್ಥಾಪಿಸಿ ಸ್ಥಳೀಯರಿಗೆ ಮಾತ್ರ ಕೆಲಸ ಸಿಗಬೇಕು, ಬೇರೆ ರಾಜ್ಯಗಳಿಂದ ಬಂದಿರುವವರನ್ನು ಇಲ್ಲಿಂದ ಓಡಿಸಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ. ಅಲ್ಲದೆ, ಸಿ. ಐ. ಟಿ. ಯು. ನಲ್ಲಿ ಕೆಲಸಮಾಡುವ ಕೇರಳದ ಕಾರ್ಮಿಕರನ್ನು ಹೊಡೆಯುವುದು, ಅವರ ಪಾಸ್ ಕಿತ್ತುಕೊಳ್ಳುವುದು, ಕೊಲ್ಲುವುದಾಗಿ ಬೆದರಿಕೆ ಹಾಕುವುದು ಸಹಾ ನಡೆದಿದೆ.

ಈಗಾಗಲೇ ಇಬ್ಬರು ಕಾರ್ಮಿಕರು ತೀವ್ರವಾದ ಗಾಯಗಳಿಂದ ಆಸ್ಪತ್ರೆ ಸೇರಿದ್ದಾರೆ. ಇಷ್ಟಾದರೂ ಪೋಲೀಸ್ ಇಲಾಖೆಯವರು ಗೂಂಡಾಗಳ ಬಗ್ಗೆ ಏನೂ ಕ್ರಮವಹಿಸಿಲ್ಲ. ಮಾತ್ರವಲ್ಲ ಸಿ. ಐ. ಟಿ. ಯು. ಕಾರ್ಮಿಕರನ್ನೇ ಹೆದರಿಸುತ್ತಿದ್ದಾರೆ.

ಈ ಬಗ್ಗೆ ನವ ಬಂದರಿನ ಮೇಲಧಿಕಾರಿಗಳು, ಸರಕಾರಿ ಅಧಿಕಾರಿಗಳೂ ಕೂಡಲೇ ಸೂಕ್ತಕ್ರಮ ತೆಗೆದುಕೊಂಡು ಭಾಷಾ ಕಲಹ, ಜಾತಿ ಕಲಹ ಮತ್ತು ಮತೀಯ ಕಲಹಗಳಿಗೆ ಆಸ್ಪದವಾಗದಂತೆ, ಅನುಕೂಲ ವಾತಾವರಣ ಕಲ್ಪಿಸಬೇಕಾಗಿದೆ. ಈ ಬಗ್ಗೆ ಜರೂರು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವಂತೆ ನವ ಬಂದರು ಕೆಲಸಗಾರರು ಸಂಬಂಧಪಟ್ಟವರಿಗೆ ಒತ್ತಾಯಿಸಿದ್ದಾರೆ. ●

ಕಾರ್ಮಿಕರ ಮೇಲಿನ ಮೊಕದ್ದಮೆಗಳನ್ನು ವಾಪಸು ಪಡೆಯಲು ಒತ್ತಾಯ

ಹಿಂದುಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿ ತಾ. 14-10-79 ರಂದು ಸಭೆಸೇರಿ, 14-9-79 ರಂದು ಸಂಘವು ಕರೆ ನೀಡಿದ್ದ ಒಂದು ದಿನದ ಮುಷ್ಕರದಲ್ಲಿ ಭಾಗವಹಿಸಿದ್ದ ಕಾರ್ಮಿಕರ ಮೇಲಿನ ಮೊಕದ್ದಮೆಗಳನ್ನು ಪೋಲೀಸರು ವಾಪಸ್ಸು ಪಡೆಯಬೇಕೆಂದು ಪೋಲೀಸ್ ಅಧಿಕಾರಿಗಳಿಗೆ ಒತ್ತಾಯಪಡಿಸಿದೆ ಹಾಗೂ ಕಾರ್ಮಿಕರನ್ನು ವಜಾ ಮಾಡುವುದರ ಮೂಲಕ ಹೆದರಿಸುತ್ತಿರುವ ಆಡಳಿತ ವರ್ಗದ ನೀತಿಯನ್ನು ಖಂಡಿಸಿದೆ. ○

ನಿಧನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದೀರ್ಘ ಕಾಲದ ಸದಸ್ಯರು ಹಾಗೂ 'ಐಕ್ಯರಂಗ'ದ ಅಭಿಮಾನಿಗಳಾಗಿದ್ದ ಕಾಂ. ಜಿ. ಸೋಮಪ್ಪ ಪೂಜಾರಿಯವರು ತಮ್ಮ 55 ನೇ ವಯಸ್ಸಿನಲ್ಲಿ, ತಾ. 12-10-79ರಂದು ನಿಧನರಾದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತಚಿಂತಕರು ಹಾಗೂ 'ಐಕ್ಯರಂಗ' ಪತ್ರಿಕೆಯ ಓದುಗರೂ ಆಗಿದ್ದ ಕಾಂ. ತಿಮ್ಮಪ್ಪ ಪೂಜಾರಿಯವರು ತಮ್ಮ 47ನೇ ವಯಸ್ಸಿನಲ್ಲಿ, ತಾ. 11-10-79ರಂದು ನಿಧನರಾದರು.

ಮೇಲಿನ ಇಬ್ಬರು ಸಂಗಾತಿಗಳಿಗೂ ಮಂಗಳೂರು ತಾಲ್ಲೂಕು, ಜಪ್ಪಿನಮೊಗರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆ. ○

ಶಿಡ್ಲಘಟ್ಟ ತಾಲ್ಲೂಕ್ ಭೂಗ್ರಹಣ

ಕೋಲಾರ ಜಿಲ್ಲಾ ರೈತಸಂಘದ ಕರೆಯಂತೆ ಶಿಡ್ಲಘಟ್ಟ ತಾಲ್ಲೂಕಿನ ಇಗಲೇಟಿ ತಿಮ್ಮಸಂದ್ರ, ಕುಂದಲಗುರ್ಕಿ ಕೆಂಪನಹಳ್ಳಿ ರೈತ ಹಾಗೂ ಕೃಷಿಕೂಲಿಗಾರರು ತಾಲ್ಲೂಕು ರೈತ ಸಂಘದ ಮುಖಂಡರಾದ ಕಾಂ. ಜಿ. ದೊರೆಸ್ವಾಮಿ ಮತ್ತು ಕಾಂ. ಕೆ. ಎಂ. ವೆಂಕಟೇಶ್‌ರವರ ನೇತೃತ್ವದಲ್ಲಿ ಭೂಗ್ರಹಣ ಮಾಡಿ ಸುಮಾರು 80 ಎಕರೆ ಬಂಜರು ಹಾಗೂ, ಅರಣ್ಯ ಭೂಮಿಯನ್ನು ವಶಪಡಿಸಿಕೊಂಡು ಉತ್ತು ಹುರಳಿ ಬಿತ್ತನೆ ಮಾಡಿರುತ್ತಾರೆ ಮತ್ತು ಅನೇಕ ಗ್ರಾಮಗಳ ಹತ್ತಿರ ಭೂಗ್ರಹಣ ನಡೆದ ವರದಿಗಳು ಬಂದಿವೆ.

ಇದಲ್ಲದೆ 1972-73 ರಲ್ಲಿ ನಡೆಸಿದ ಭೂಗ್ರಹಣ ಚಳುವಳಿಯಲ್ಲಿ ಇಗಲೇಟಿ ತಿಮ್ಮಸಂದ್ರ, ಕುಂದಲಗುರ್ಕಿ ಇತರೆ ಕಡೆಗಳಲ್ಲಿ ವಶಪಡಿಸಿಕೊಂಡ ನೂರಾರು ಎಕರೆ ಭೂಮಿಯನ್ನು ಕಲ್ಲು, ಮುಳ್ಳು ಗಿಡಗಳನ್ನು ಕಿತ್ತು ಹಳ್ಳದಿನ್ನೆಗಳನ್ನು ಹಸನುಮಾಡಿ ಬೆಳೆಗಳನ್ನು ಇಡುತ್ತಾ ಬಂದಿರುತ್ತಾರೆ. ಈ ಜಮೀನುಗಳನ್ನು ಕೆಲವು ಕಡೆ ಸರ್ಕಾರದವರು ಅಳತೆ ಮಾಡಿರುತ್ತಾರೆ. ಮಿಕ್ಕಕಡೆಗಳಲ್ಲಿ ತಕ್ಷಣವೆ ಅಳತೆಮಾಡಿ ಭೂಹೀನರಿಗೆ ಸಾಗುವಳಿ ಚೀಟಿಕೊಡಬೇಕೆಂದು ರೈತ ಸಂಘ ಒತ್ತಾಯಿಸಿದೆ. ತಾಲ್ಲೂಕಿನಲ್ಲಿ ಸಾವಿರಾರು ಭೂಹೀನ ಕೃಷಿಕೂಲಿಗಾರರು ಸರ್ಕಾರಕ್ಕೆ ಅನೇಕ ಅರ್ಜಿ ಮತ್ತು ಮನವಿಗಳನ್ನು ಅರ್ಪಿಸಿದ್ದರೂ ಸರ್ಕಾರ ಇದುವರೆವಿಗೂ ಗಮನಹರಿಸಿಲ್ಲ. ಆದ್ದರಿಂದ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಬಂಜರು ಹಾಗೂ ಅರಣ್ಯ ಭೂಮಿಯನ್ನು ವಿಳಂಬವಿಲ್ಲದೆ ಹಂಚಿಕೆಯಾಗಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ರೈತಸಂಘ ಸರಕಾರವನ್ನು ಒತ್ತಾಯಿಸಿದೆ. ○

ಶಿಡ್ಲಘಟ್ಟದ ಪೌರ ಕಾರ್ಮಿಕರಿಗೆ ಕೊಡಬೇಕಾದ ತೇವಣಾತಿ ಹಣ ಸಂದಾಯ ಮಾಡಲು ಒತ್ತಾಯ

ಕೋಲಾರ ಜಿಲ್ಲೆ ಶಿಡ್ಲಘಟ್ಟ ಟೌನ್ ಪುರಸಭೆಯಲ್ಲಿ ದುಡಿಯುವ ಪುರಸಭೆಯ ನೌಕರರಿಗೆ ಈಗಾಗಲೇ ಸಂದಾಯವಾಗಬೇಕಾಗಿರುವ ಮೂರು ಕಂತುಗಳ ತೇವಣಾತಿ ಹಣ ಸಂದಾಯವಾಗದೇ ಇರುವುದು ವಿಷಾದಕರ. ನೌಕರರಿಗೆ ತೇವಣಾತಿ ಹಣ ಸಂದಾಯ ಮಾಡಲು ಸ್ಪಷ್ಟವಾಗಿ ಆಜ್ಞೆಗಳು ಬಂದಿದ್ದರೂ ಸಂದಾಯ ಮಾಡಲು ಮೀನ-ಮೇಷ ಎಣಿಸುತ್ತಿರುವುದು ಸಮಂಜಸವಲ್ಲ.

ಈ ಕೂಡಲೇ ಪುರಸಭೆಯ ನೌಕರರಿಗೆ ತೇವಣಾತಿ ಹಣವನ್ನು ಸಂದಾಯ ಮಾಡಲು ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆಯ ಕಾರ್ಯದರ್ಶಿ ಎನ್. ಮಣಿಯವರು ಪುರಸಭೆಯ ಚೀಫ್ ಆಫೀಸರ್‌ರವರಲ್ಲಿ ಒತ್ತಾಯಿಸಿದ್ದಾರೆ. ●

ಕಡಂಬಲಿಕೆಯಲ್ಲಿ ಬಹಿರಂಗ ಸಭೆ

ದ. ಕ. ಜಿಲ್ಲಾ ಬಂಟ್ವಾಳ ತಾಲ್ಲೂಕು ಕಡಂಬಲಿಕೆಯಲ್ಲಿ ಅಕ್ಟೋಬರ್ 21 ರಂದು ಕಾಂ. ನಕ್ಕುರಪೂಜಾರಿಯವರ ಅಧ್ಯಕ್ಷತೆಯಲ್ಲಿ ರೈತ-ಕಾರ್ಮಿಕರ ಬಹಿರಂಗ ಸಭೆ ಜರುಗಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಥಳೀಯ ಮುಖಂಡ ಕಾಂ. ಬಿ. ನಾರಾಯಣನವರು ಮತ್ತು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಎಚ್. ಬಂಗೇರನವರು ಮಾತನಾಡಿ ಭೂಹೀನ ಕೃಷಿಕಾರ್ಮಿಕರ ಬಲಿಷ್ಟ ಸಂಘಟನೆ ಮತ್ತು ಹೋರಾಟಕ್ಕೆ ಕರೆ ಇತ್ತರು. ಕಾಂ. ಬಿ. ಮಂಜುನಾಥ ಸಫಲ್ಯನವರು ಸ್ವಾಗತಿಸಿದರು. ಕಾಂ. ಕೂಸಪ್ಪಗಟ್ಟಿಯವರು ಧನ್ಯವಾದಗಳನ್ನು ಅರ್ಪಿಸಿದರು. ●

ಹೋರಾಟವೇ ಮುಂದಿನ ದಾರಿ!

1971 ರಲ್ಲಿ ಮಾಜಿ ಮೈಸೂರಿನ ಮಹಾರಾಜರು ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರಿಗೆ ತಮ್ಮ ತಾಯಿಯ ಹೆಸರಿನಲ್ಲಿ ಮನೆಕಟ್ಟಿಕೊಳ್ಳಲು ಕುರುಬಾರ ಹಳ್ಳಿ ಪ್ರದೇಶದಲ್ಲಿ 156 ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದರು. ಸಹಕಾರಿ ಸಂಘಗಳ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದರ ಬದಲು ಕಿರುಕುಳ ಕೊಡುತ್ತಲಿದ್ದಾರೆ. ಈ ವಿಷಯವಾಗಿ 1972 ರಿಂದ ಇಲ್ಲಿಯವರೆಗೂ ನಗರಾಭಿವೃದ್ಧಿ ಮಂಡಳಿಗೆ, ವಿಶೇಷ ಜಿಲ್ಲಾಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಇವರಿಂದ ನಿರಾಶರಾದ ನೌಕರರು ಮುಖ್ಯ ಮಂತ್ರಿಗಳನ್ನೂ ರಾಜ್ಯಪಾಲರನ್ನೂ ಭೇಟಿಯಾಗಿ ಮನವಿಯನ್ನರ್ಪಿಸಿದ್ದಾರೆ.

"ಮನೆಯಿಲ್ಲದವರಿಗೆ ಮನೆ" ಎಂದು ಜಂಬಕೊಚ್ಚುವ ಈ ಕಾಂಗ್ರೆಸ್ ಸರಕಾರದ ಅಡಿಯಲ್ಲಿ ದಾನವಾಗಿ ದೊರೆತ ಭೂಮಿಯನ್ನೂ ಸಹ ಕಸಿದುಕೊಳ್ಳುವ ಪ್ರಯತ್ನಗಳು ಇದೇ ಸರಕಾರದ ನೌಕರರಿಂದ ನಡೆಯುತ್ತಿವೆ.

ಬೇರಾವ ಉಪಾಯ ಕಾಣದ ನೌಕರರು ಹೋರಾಟವೇ ಮುಂದಿನ ದಾರಿಯೆಂದು ಖಚಿತಗೊಂಡು ತಾ. 2-11-79 ರಿಂದ ದಾನಪತ್ರ ಬರೆಸಿಕೊಂಡಿರುವ ಸಹಕಾರ ಸಂಘದ ಅಧಿಕಾರಿಗಳ ಕಛೇರಿಯ ಮುಂದೆ ತಂಡತಂಡವಾಗಿ ಸತ್ಯಾಗ್ರಹವನ್ನು ನಡೆಸಲು ಪ್ರಾರಂಭಿಸಿರುವರು. ●

ಗಮನಿಸಿರಿ

ವಾರ್ತೆ ಮತ್ತು ವರದಿ ಕಳುಹಿಸುವವರ ಅವಗಾಹನೆಗೆ

ಐಕ್ಯರಂಗ ಆಫೀಸಿಗೆ ವರದಿ ಮತ್ತು ವಾರ್ತೆಗಳು ತಡವಾಗಿ ಬಂದಲ್ಲಿ ನಾವು ಸಮಯಕ್ಕೆ ಸರಿಯಾಗಿ ಅವನ್ನು ಪ್ರಕಟಿಸಲು ಆಗುವುದಿಲ್ಲ. ಯಾವುದೇ ಕಾರ್ಯಕ್ರಮ ನಡೆದು ಕನಿಷ್ಟ ಎರಡು ಮೂರು ದಿನಗಳೊಳಗಾದರೂ ನಮಗೆ ವರದಿ ದೊರೆತಲ್ಲಿ ಅದೇ ವಾರದಲ್ಲಲ್ಲವಾದರೂ, ಮುಂದಿ ವಾರದ ಸಂಚಿಕೆಯಲ್ಲಿ ಪ್ರಕಟಿಸುವುದು ಸಾಧ್ಯ. ದಯವಿಟ್ಟು ಸಹಕರಿಸಬೇಕಾಗಿ ವಿನಂತಿ.

ಎಂ. ಕೆ. ಭಟ್
ಸಂಪಾದಕ

ನವೆಂಬರ್ 10 ರಂದು ಸರ್ವಾಧಿಕಾರಿ ಮತ್ತು ಕೋಮುವಾದ ವಿರೋಧ ಸಮ್ಮೇಳನ

ಈ ಹಿಂದೆ ತಿಳಿಸಿದಂತೆ ಸರ್ವಾಧಿಕಾರಿ ಮತ್ತು ಕೋಮುವಾದ ವಿರೋಧಿ ರಾಜ್ಯ ಮಟ್ಟದ ಸಮಾವೇಶವು ನವೆಂಬರ್ 10 ರಂದು ಬೆಂಗಳೂರು ನಗರದಲ್ಲಿ ಜರುಗುವುದು. ರಾಜ್ಯದ ಎಲ್ಲಾ ಪ್ರದೇಶಗಳಿಂದ ಪ್ರತಿನಿಧಿಗಳು ಬರುವಂತೆ ಪಕ್ಷದ ಎಲ್ಲಾ ಘಟಕಗಳೂ, ಸಾಮೂಹಿಕ-ಸಂಘಟನೆಗಳೂ ಪ್ರಯತ್ನಿಸಬೇಕು. 10ರಂದು ಬೆಳಿಗ್ಗೆಯಿಂದ ಸಂಜೆ ತನಕ ಪ್ರತಿನಿಧಿ ಸಭೆ ಮತ್ತು ಸಂಜೆಗೆ ಬೃಹತ್ ಬಹಿರಂಗ ಸಭೆ ಇದೆ. ಬಹಿರಂಗ ಸಭೆಗೆ ಮೊದಲು ಬೇರೆಬೇರೆ ಪಕ್ಷಗಳವರಿಂದ ಮೆರವಣಿಗೆ ತೆಗೆಯಲಾಗುವುದು. ಪ್ರತಿನಿಧಿಗಳಾಗಿ ಬಂದವರು ಪಕ್ಷದ ರಾಜ್ಯಸಮಿತಿ ಆಫೀಸಿಗೆ ಬಂದು ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಬಹುದು. ಪ್ರತಿನಿಧಿಗಳು ಇಷ್ಟೇ ಬರಬೇಕೆಂಬ ನಿಗದಿ ಇಲ್ಲ.

ಎಂ. ಕೆ. ಭಟ್
ಕಾರ್ಯದರ್ಶಿ
ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ
ಕರ್ನಾಟಕ ರಾಜ್ಯಸಮಿತಿ

ಸಂಘಟನೆಯನ್ನು ಬಲಪಡಿಸಲು ಕರೆ

[2ನೇ ಪುಟದಿಂದ]

ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್ ಮಾತನಾಡಿ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳ ಮಹತ್ವ, ಸಂಘಟನೆಯ ಅಗತ್ಯ ಮತ್ತು ಜಿಲ್ಲೆಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ವಿ. ಚಿಕ್ಕವೀರಯ್ಯನವರು ವಹಿಸಿದ್ದರು.

ಕುಣಿಗಲ್ ತಾಲ್ಲೂಕು ರೈತ ಸಂಘಕ್ಕೆ ಆಯ್ಕೆ :

ತಾ. 24-10-79 ರಂದು ಕುಣಿಗಲ್ ತಾಲ್ಲೂಕು ರೈತಸಂಘದ ಸಮಿತಿ ಸಭೆ ಕಾಂ. ದಸ್ತಗೀರ್‌ರವರ ಅಧ್ಯಕ್ಷತೆಯಲ್ಲಿ ಸೇರಿ, ತಾಲ್ಲೂಕು ಸಮಿತಿಯನ್ನು ಪುನರ್ ರಚಿಸಲಾಯಿತು. ತಾಲ್ಲೂಕು ಸಮಿತಿಗೆ ಈ ಕೆಳಕಂಡ 9 ಮಂದಿ ಸದಸ್ಯರನ್ನು ಚುನಾಯಿಸಲಾಯಿತು.

ಕಾಂ. ಎನ್. ಬಿ. ಲಿಂಗದೇವರು,
ಅಡ್ವೋಕೇಟ್ ಅಧ್ಯಕ್ಷ
ಕಾಂ. ಬಿ.ಜಿ. ಗಂಗಾಧರ್,
ಕಾರ್ಯದರ್ಶಿ

ಶ್ರೀ ಚಿಕ್ಕವೀರಯ್ಯ, ಮುದ್ದಹನುಮಯ್ಯ, ತಿಮ್ಮಯ್ಯ, ಗಂಗಯ್ಯ, ರಂಗಯ್ಯ, ಮುನಿಸ್ವಾಮಯ್ಯ ಹಾಗೂ ಬಡೇಸಾಬ್ ಕಾರ್ಯಕಾರಿಸಮಿತಿ ಸಭೆ ಸದಸ್ಯರು. ●

ಕೊಳೆತ ಸಮಾಜ ವ್ಯವಸ್ಥೆಯ ಬದಲಾವಣೆಗಾಗಿ ಚಿಂತಿಸಿ

[3ನೇ ಪುಟದಿಂದ]

ದಂತೆ ಮಾಡುವಲ್ಲಿ ಸ್ಥಾಪಿತ ಹಿತಾಸಕ್ತಿಗಳು ಯಶಸ್ವಿಯಾಗಿವೆ. ಇವರ ವಿರುದ್ಧ ತೀವ್ರವಾದ ಹೋರಾಟವನ್ನು ವಿದ್ಯಾರ್ಥಿ, ಯುವಜನತೆ ಇತರ ವಿಭಾಗದೊಂದಿಗೆ ಸೇರಿ ಮಾಡಲೇಬೇಕಾಗಿದೆ. ಆದರೆ ಇದು ಶಾಂತಿಯುತವಾಗಿ ಸಾಧ್ಯವೆಂಬ ಭರವಸೆ ನನ್ನಲಿಲ್ಲ..." ಎಂದರು.

500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ತಾಲ್ಲೂಕು ಎಸ್. ಎಫ್. ಐ. ಅಧ್ಯಕ್ಷರಾದ ಶ್ರೀ ಗಣೇಶ್ ಕಾರಂತ್‌ರವರು ಸ್ವಾಗತಿಸಿದರು. ನಂತರ ಕಾರ್ಯದರ್ಶಿ ಶ್ರೀ ಆರ್. ಜಯಕುಮಾರ್‌ರವರು ಸಭೆಗೆ ಎಸ್. ಎಫ್. ಐ. ಕಾರ್ಯಕ್ರಮಗಳನ್ನು ಪರಿಚಯಿಸಿದರು. ಶ್ರೀ ರಾಮಕೃಷ್ಣ ಶೆಟ್ಟಿಯವರ ಧನ್ಯವಾದದ ನಂತರ ಎಸ್. ಎಫ್. ಐ. ಬಳಗದವರು ಕ್ರಾಂತಿ ಗೀತೆಗಳನ್ನು ಹಾಡಿ ಸಭೆಯನ್ನು ರಂಜಿಸಿದರು. ●

ಪೊಲಿಟ್‌ಬ್ಯೂರೋ ಕರೆ

[ಒಂದನೇ ಪುಟದಿಂದ]

ಭುತ್ವವಾದಿ ಶಕ್ತಿಗಳ ವಿರುದ್ಧ ತಿರುಗಿ ನಿಲ್ಲುವಂತೆ ಮಾಡಬಹುದು; ಅಂತಿಮವಾಗಿ ಇದು ಸರ್ವಾಧಿಕಾರಿ ಶಕ್ತಿಯನ್ನು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ (ಐ) ಯನ್ನು ಬಲಪಡಿಸುವ ಅಪಾಯವಿದೆ. ಆದಕಾರಣ ಕೇರಳ ಪ್ರದೇಶ ಕಾಂಗ್ರೆಸ್ ತನ್ನೀ ವರ್ತನೆಯನ್ನು ಕೂಡಲೇ ಬದಲಾಯಿಸಿಕೊಳ್ಳಬೇಕು. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯದ ಕುರಿತು ಭೀತರಾಗಿರುವ ಕೋಮುವಾದಿ ಶಕ್ತಿಗಳು ಮತ್ತು ಸ್ಥಾಪಿತ ಹಿತಾಸಕ್ತಿಗಳ ತಂತ್ರಗಳನ್ನು ವಿಫಲಗೊಳಿಸಲು ಎಲ್ಲಾ ಪ್ರಜಾಪ್ರಭುತ್ವವಾದಿಗಳೂ, ಜಾತ್ಯತೀತ ಶಕ್ತಿಗಳೂ ಒಂದಾಗಬೇಕೆಂದು ಪೊಲಿಟ್‌ಬ್ಯೂರೋ ಕರೆಯಿತ್ತಿದೆ.

ಲೋಕದಳ-ಕಾಂಗ್ರೆಸ್ ಸರಕಾರದ ಕೆಲವು ಧೋರಣೆಗಳು ಮತ್ತು ವರ್ತನೆ ಮುಖ್ಯವಾಗಿ ಪ್ರತಿಬಂಧಕ ಸ್ಥಾನಬದ್ಧತಾ ಕಾನೂನನ್ನು ಮರಳಿ ಜಾರಿಗೆ ತಂದುದು, ರೈಲ್ವೇ ಮತ್ತಿತರ ನೌಕರರಿಗೆ ಬೋನಸ್ ನಿರಾಕರಣೆ, ಬೆಲೆಏರಿಕೆಯನ್ನು ತಡೆಗಟ್ಟುವಲ್ಲಿ ಸರಕಾರದ ವೈಫಲ್ಯ, ಕಾರ್ಮಿಕರ ಮುಷ್ಕರ ಹೂಡುವ ಹಕ್ಕು ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಬಗ್ಗೆ ಸರಕಾರ ಕೈಗೊಳ್ಳುವುದೆಂದು ಹೇಳಲಾದ ಕೆಲವು ಕ್ರಮಗಳು - ಇವೆಲ್ಲ ದುಡಿಯುವ ಜನತೆಯ ಮಧ್ಯೆ ವಿಶೇಷ ಕಳವಳಕ್ಕೆ ಕಾರಣವಾಗಿವೆ ಮತ್ತು ಅವರನ್ನು ದೂರ ಮಾಡುತ್ತಿವೆ. ಇದು ಸರ್ವಾಧಿಕಾರ ಮತ್ತು ಕೋಮುವಾದ ವಿರುದ್ಧ ನಡೆಯುವ ಹೋರಾಟಕ್ಕೆ ತುಂಬಾ ಆತಂಕವೊಡ್ಡುತ್ತಿದೆ. ಸರ್ವಾಧಿಕಾರ ಮತ್ತು ಕೋಮುವಾದದ ವಿರುದ್ಧ ನಡೆಯುವ ಹೋರಾಟವು ಜನಸಮಾನ್ಯರಿಗೆ ಸವಲತ್ತುಗಳನ್ನೂ ಪರಿಹಾರವನ್ನೂ ಒದಗಿಸುವ ಕೆಲಸದಿಂದ ಪ್ರತ್ಯೇಕವಾಗಿರಕೂಡದು. ಇವೆರಡೂ ಒಟ್ಟಿಗೇ ಸಾಗಬೇಕಾಗಿದೆ. ಬೆಲೆಯೇರಿಕೆಗಾಗಲೀ ಹಣದುಬ್ಬರಕ್ಕಾಗಲೀ ಕಾರಣವಾಗಿರುವವರ ಬಗ್ಗೆ ಸುಮ್ಮನೆ ಮಾತನಾಡುವುದನ್ನು ಬಿಟ್ಟು ಸರಕಾರವು ಸಾರ್ವಜನಿಕ ವಿತರಣ ಪದ್ಧತಿಯ ಮೂಲಕ ಜನಸಾಮಾನ್ಯರಿಗೆ ಅವಶ್ಯಕ ವಸ್ತುಗಳನ್ನು ನ್ಯಾಯಬೆಲೆಯಲ್ಲಿ ಸರಬರಾಜುಮಾಡಲೂ ಕ್ಷಾಮಪೀಡಿತ ಜನರಿಗೆ ಪರಿಹಾರ ನೀಡಲೂ ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಕಾಂಗ್ರೆಸ್ - ಲೋಕದಳ ಮೈತ್ರಿಕೂಟದೊಳಗಿರುವ ಬೇರಬೇರೆ ಘಟಕ ಪಕ್ಷಗಳು ಒಳಜಗಳಗಳಲ್ಲಿ ನಿರತರಾಗಿರುವುದು ಮೈತ್ರಿಕೂಟದ ಐಕ್ಯಕ್ಕೆ ಭಂಗವುಂಟುಮಾಡುತ್ತಿದೆ. ಹೆಚ್. ಎನ್. ಬಹುಗುಣ ಅವರ ರಾಜೀನಾಮೆ ಮತ್ತು ಸಿ.ಎಫ್.ಡಿ. ಈ ಮೈತ್ರಿಕೂಟದಿಂದ ಹೊರನಡೆದುದೂ ಈ ದಿಸೆಯಲ್ಲಿ ಮತ್ತೊಂದು ದೊಡ್ಡ ಹಿಂದೇಟು. ತನ್ನ ಪತ್ರಿಕಾ ಹೇಳಿಕೆಯಲ್ಲಿ ಬಹುಗುಣ ಅವರು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುವ ವಿಷಯ ಚಕಾರವೆತ್ತದಿರುವುದು ಪೊಲಿಟ್ ಬ್ಯೂರೋಗೆ ಆಶ್ಚರ್ಯವುಂಟುಮಾಡಿದೆ. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸಂಯುಕ್ತ ಹೋರಾಟ ನಡೆಸುವ ಪ್ರಶ್ನೆಯನ್ನೇ ಬಹುಗುಣ ಒಪ್ಪಿಕೊಂಡಂತೆ ಕಾಣುತ್ತಿಲ್ಲ. ಇದು ಇಂದಿರಾಗಾಂಧಿಗಂತೂ ತುಂಬಾ ಅನುಕೂಲಕರವಾಗಲಿದೆ. ಸರ್ವಾಧಿಕಾರ ಮತ್ತು ಕೋಮುವಾದದ ವಿರುದ್ಧ ಹೋರಾಟದಲ್ಲಿ ಸಿ.ಎಫ್.ಡಿ. ಇವೆರಡೂ ದುಷ್ಟ ಶಕ್ತಿಗಳಿಗೆ ವಿರುದ್ಧವಾಗಿರುವ ಇತರರ ಜೊತೆಗೇ ನಿಲ್ಲಬೇಕೆಂದೂ ಪ್ರಜಾಸತ್ತಾತ್ಮಕ ಐಕ್ಯಕ್ಕೆ ಒಡಕುಂಟು ಮಾಡಬಾರದೆಂದೂ ಪೊಲಿಟ್ ಬ್ಯೂರೋ ಅದನ್ನು ಒತ್ತಾಯಿಸುತ್ತದೆ.

ಧಾರ್ಮಿಕ ಸಂಕುಚಿತವಾದಿ ಆರೆಸ್ಸೆಸ್ ಜನಸಂಘದ ಅಂಕೆಯಲ್ಲಿರುವ ಜನತಾಪಕ್ಷವೂ ಜನರ ಆಕ್ರೋಶಕ್ಕೆ ಗುರಿಯಾಗಿದೆ. ಹಾಗಾಗಿ ಅದು ಸಂರಕ್ಷಣಾತ್ಮಕ ತಂತ್ರಗಳನ್ನು ಬಳಸಿಕೊಳ್ಳುತ್ತಿದೆ; ಮಾತ್ರವಲ್ಲ, ಇಂದಿರಾ ಕಾಂಗ್ರೆಸ್‌ನೊಂದಿಗೆ ರಹಸ್ಯ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ತನ್ನನ್ನು ತಾನು ಬಲಪಡಿಸಿಕೊಳ್ಳಲೂ ಪ್ರಯತ್ನಿಸುತ್ತಿದೆ. ಬನ್ಸಿಲಾಲ್ ವಿರುದ್ಧ ಹಾಕಲಾಗಿದ್ದ ಕ್ರಿಮಿನಲ್ ಮೊಕದ್ದಮೆಗಳನ್ನು ಹರ್ಯಾನಾ ಸರಕಾರವು ಹಿಂತೆಗೆದುಕೊಂಡಿರುವುದು ಇದಕ್ಕೆ ದೃಷ್ಟಾಂತ.

ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಲಾಗಿರುವಂತೆ ನಿರಂಕುಶಾಧಿಕಾರಿ ಪ್ರವೃತ್ತಿ ಮತ್ತು ಸರ್ವಾಧಿಕಾರದ ಮಹತ್ವಾಕಾಂಕ್ಷೆಯನ್ನು ಸ್ಪಷ್ಟವಾಗಿ ಪ್ರತಿನಿಧಿಸುವ ಅಪಾಯಕಾರಿ ಶಕ್ತಿಗಳಲ್ಲಿ ಕಾಂಗ್ರೆಸ್ (ಐ) ಮುಖ್ಯವಾದುದು. ಅದರಿಂದಾಗಿ ಸಂವಿಧಾನಕ್ಕೂ ವಿಪತ್ತುಂಟಾಗಲಿದೆ. ಹಾಗಾಗಿ ನಮ್ಮ ಸರ್ವ ಸಾಮರ್ಥ್ಯವನ್ನೂ ಒಂದುಗೂಡಿಸಿ ಕಾಂಗ್ರೆಯನ್ನು ಸೋಲಿಸಲೇಬೇಕು. ಇಂದಿನ ಗೊಂದಲ, ಅನಿಶ್ಚಿತತೆ, ಆರ್ಥಿಕ ಮುಗ್ಗಟ್ಟು ಮತ್ತು ಕೇಂದ್ರದ ಉಸ್ತುವಾರಿ ಸರಕಾರದ ಕೆಲವು ವೈಫಲ್ಯಗಳ ಲಾಭ ಪಡೆದು ಇಂದಿರಾಗಾಂಧಿ ಮತ್ತೊಮ್ಮೆ ಅಧಿಕಾರಕ್ಕೆ ಬರಲು ಹಾತೊರೆಯುತ್ತಿರುವುದು ಸ್ಪಷ್ಟ. ಜನತೆಗೆ ಸುಭದ್ರ ಸರಕಾರವನ್ನು ನೀಡುವ ಆಶ್ವಾಸನೆಯನ್ನು ಕೊಡುತ್ತಿರುವ ಆಕೆ ತನ್ನ ಅಧಿಕಾರಾವಧಿಯಲ್ಲಿ ಜನತೆಯ ಜೀವನ ಮಟ್ಟಕ್ಕೆ ಯಾವುದೇ ಭದ್ರತೆ ಒದಗಿಸಿರಲಿಲ್ಲ ಮತ್ತು ಜನರ ಹೋರಾಟವನ್ನು ದಮನಿಸಲು ವಿಷಮ ಪರಿಸ್ಥಿತಿಯನ್ನು ಅವರ ಮೇಲೆ ಹೇರಿದ್ದುದನ್ನೂ ನೆನಪಿಸೋಣ. ತನ್ನನ್ನು ವಿರೋಧಿಸುವ ಶಕ್ತಿಗಳ ಮಧ್ಯೆ ಒಡಕುಂಟುಮಾಡಿ, ನಿರಂಕುಶಾಧಿಕಾರಕ್ಕೆ ವಿರುದ್ಧವಾಗಿರುವ ಮತಗಳನ್ನು ವಿಭಜಿಸಿ, ಬೇರೆಬೇರೆ ಬೂರ್ಜ್ವಾ ಪಕ್ಷಗಳೊಂದಿಗೆ ಸಂದರ್ಭಸಾಧಕ ಮೈತ್ರಿ ಮಾಡಿಕೊಳ್ಳುವುದು ಇಂದಿರಾಗಾಂಧಿಯ ಪ್ರಮುಖ ಅಸ್ತ್ರ, ಡಿ.ಎಂ.ಕೆ. ಯೊಂದಿಗೆ ಇಂದಿರಾ ಮಾಡಿಕೊಂಡಿರುವ ಮೈತ್ರಿ ಇದಕ್ಕೆ ನಿದರ್ಶನ. ಇಂದಿರಾಗಾಂಧಿಯ ತತ್ವಭ್ರಷ್ಟತೆ ಎಲ್ಲಿಯವರೆಗೆ ಹೋಗಿದೆಯೆಂದರೆ ಇದೀಗ ಕಾಂಗ್ರೆ ಪಕ್ಷವು ಆರೆಸ್ಸೆಸ್ ಮುಂದಾಳುಗಳೊಂದಿಗೂ ಒಪ್ಪಂದ ಮಾಡಿಕೊಳ್ಳುತ್ತಿದೆ. ತಲೆತಲಾಂತರಗಳಿಂದ ಅಸ್ಸಾಂನಲ್ಲಿ ನೆಲೆಸಿರುವ ಬಂಗಾಳಿ, ಹಿಂದೂ, ಮುಸಲ್ಮಾನ ಜನರನ್ನು ಅಸ್ಸಾಮಿನಿಂದ ಹೊರಹಾಕಬೇಕೆಂದು ಪ್ರತಿಗಾಮಿಗಳು ನಡೆಸುತ್ತಿರುವ ಚಳುವಳಿಗೆ ಇಂದಿರಾ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ಬನ್ಸಿಲಾಲರನ್ನು ಮತ್ತೊಮ್ಮೆ ಗದ್ದುಗೆಗೆ ಏರಿಸಲಾಗಿದೆ. ಸಂಜಯಗಾಂಧಿಯನ್ನು ಒಂದೇ ಸಮನೆ ಪ್ರಶಂಸಿಸಲಾಗುತ್ತಿದೆ. ಹೀಗೆ ಕಾಂಗ್ರೆನೊಳಗೆ ತುರ್ತುಪರಿಸ್ಥಿತಿ ಖ್ಯಾತಿಯ ದುಷ್ಟಕೂಟ ಮತ್ತೊಮ್ಮೆ ಪ್ರಬಲವಾಗಿದೆ. ದೇಶದ ದೊಡ್ಡ ಬಂಡವಾಳಗಾರರ ಪತ್ರಿಕೆಗಳೂ ಇಂದಿರಾಗಾಂಧಿಗೆ ತುಂಬಾ ಪ್ರಚಾರ ನೀಡುತ್ತಿವೆ.

ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯವೊಂದೇ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳಿಗೆ ಪ್ರಬಲ ಪ್ರಹಾರ ನೀಡಬಲ್ಲಂತಹ ಶಕ್ತಿಬಣ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಿ ಶ್ರಮಿಸಿದಲ್ಲಿ ಕಾಂಗ್ರೆಸ್ ಮತ್ತು ಲೋಕದಳಗಳ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು ಸಾಧ್ಯ. ಈ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯವು ಚುನಾವಣೆ ಮುಗಿದ ಮೇಲೂ ದೇಶದ ಭವಿಷ್ಯವನ್ನು ನಿರೂಪಿಸುವಲ್ಲಿ ಮತ್ತು ಪ್ರಜಾಸತ್ತಾತ್ಮಕ ಜಾತ್ಯತೀತ ಶಕ್ತಿಗಳನ್ನು ಬಲಪಡಿಸುವಲ್ಲಿ ನಿರ್ಣಾಯಕ ಪಾತ್ರವಹಿಸಬಲ್ಲುದು. ಆದಕಾರಣ ಜನತೆ ನಿರಂಕುಶಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳ ಅಪಾಯವನ್ನು ಮನಗಂಡು ಅವುಗಳಿಗೆ ತೀವ್ರ ಪ್ರಹಾರ ನೀಡುವ ಮೂಲಕ ಪ್ರಜಾಪ್ರಭುತ್ವವಾದಿ, ಜಾತ್ಯತೀತ ಶಕ್ತಿಗಳು ಜಯಿಸುವಂತೆ ಮಾಡಬೇಕು ಎಂಬುದಾಗಿ ಪೊಲಿಟ್‌ಬ್ಯೂರೋ ಕರೆಯಿತ್ತಿದೆ. ●

ಬಂಟ್ವಾಳ ತಾಲ್ಲೂಕು ರೈತಸಂಘ ಸಮಿತಿ ರಚನೆ

ದ. ಕ. ಜಿಲ್ಲಾ ಬಂಟ್ವಾಳ ತಾಲ್ಲೂಕು ರೈತಸಂಘದ ವಿಸ್ತೃತ ಸಭೆಯು ತಾ. 19-10-79 ರಂದು ಕಾಂ. ಬಿ. ಹೂವಯ್ಯ ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಕಾಂ. ಬಿ. ನಾರಾಯಣರು ಸ್ವಾಗತಿಸಿದರು.

ಜಿಲ್ಲೆಯಲ್ಲಿ ರೈತಸಂಘದ ಚಟುವಟಿಕೆ ಹಾಗೂ ಕಾರ್ಯಕ್ರಮ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರೈತ, ಕೃಷಿ ಕೂಲಿಗಾರರ ಸಂಘಟನೆಯ ಅವಶ್ಯಕತೆ ಹಾಗೂ ಮುಂದಿರುವ ಸಮಸ್ಯೆಗಳ ಬಗ್ಗೆ ಕಾಂ. ಯು. ಜನಾರ್ಧನ ನ್ಯಾಕ್, ಕೆ. ಆರ್. ಶ್ರೀಯಾನ್, ರುಕ್ಮಯ್ಯ ಪೂಜಾರಿ, ಮೋನಪ್ಪ ಸಫಲ್ಯ, ದೊಂಬಯ ಕುಂಗರ್, ಕೂಸಪ್ಪಗಟ್ಟಿ, ಚಂದ್ರ ಮೊದಲಾದವರು ಮಾತನಾಡಿದರು.

ಬಳಿಕ ಬಂಟ್ವಾಳ ತಾಲ್ಲೂಕು ರೈತ ಸಂಘವನ್ನು ರಚಿಸಲಾಯಿತು.

ಅಧ್ಯಕ್ಷ-ರುಕ್ಮಯ್ಯ ಪೂಜಾರಿ, ಉಪಾಧ್ಯಕ್ಷ-ಉರ್ಬನ್ ಲೋಬೊ, ಕಾರ್ಯದರ್ಶಿ-ಬಿ. ಹೂವಯ್ಯ ಬಂಗೇರ, ಜತೆ ಕಾರ್ಯದರ್ಶಿಗಳು-ಸಜೀವಬಂಗೇರ, ಶ್ರೀಕೇಶ ನಾವೂರ ಹಾಗೂ 15 ಜನರ ಸಮಿತಿ ರಚಿಸಲಾಯಿತು.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT